ಉಪನ್ಯಾಸ
ಗ್ರಂಥಮಾಲೆ

೨೧೮

ಬಳ್ಳಾರಿ ಜಿಲ್ಲೆಯ ಶಿವಶರಣರು

ಶಾಂತರಸ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ನವ್ಹೆಂಬರ, ೧೯೭೫

ರಜತ ಮಹೋತ್ಸವದ ಪ್ರಕಟಣೆ

ಉಪನ್ಯಾಸ ಗ್ರಂಥಮಾಲೆ

೨೧೮

ಬಳ್ಳಾರಿ ಜಿಲ್ಲೆಯ ಶಿವಶರಣರು

ಶಾಂತರಸ

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ನವ್ಹಂಬರ, ೧೯೭೫

ಪ್ರಕಾಶಕರು :
ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್. ಬಿ.
ಕುಲಸಚಿವರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ನವ್ಹೆಂಬರ, ೧೯೭೫

ಪ್ರತಿಗಳು : ೫೦೦೦

ಬೆಲೆ : ೨೫ ಪೈಸೆ

ಮುದ್ರಕರು :
ಶ್ಯಾಮಕುಮಾರ ಹೊರಡಿ
ಮೋಹಕ ಪ್ರಿಂಟರ್ಸ್, ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯ ೊ ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ ದಲ್ಲದೆ ಎಂತಹ ವಿಷಯುವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನ ಮುಟ್ಟಿ ಸಹಕರಿಸುತ್ತಿರುವದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೨೧೭ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರು ವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆ ಯನ್ನೂ ವ್ಯಕ್ತಗೊಳಿಸುತ್ತದೆ ಇದು ನಾಡಿನ ಪ್ರಗತಿಯ ಚಿಹ್ನೆ ಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋ ಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-೫೮೦೦೦೩
೧-೧೧-೧೯೭೫

ಆರ್. ಸಿ. ಹಿರೇಮಠ
ಕುಲಪತಿಗಳು

ಅರಿಕೆ

ಎಪ್ರಿಲ್ ೧೯೭೪ರಲ್ಲಿ ಬಳ್ಳಾರಿ ಜಿಲ್ಲೆಯ ಚೇಳ್ಳಗುರಿಕಿಯಲ್ಲಿ ನಡೆದ ಕರ್ನಾಟಕ ವಿಶ್ವವಿದ್ಯಾಲಯದ ೧೮೦ ನೆಯ ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರದಲ್ಲಿ ನಾನು "ಬಳ್ಳಾರಿ ಜಿಲ್ಲೆಯ ಶಿವಶರಣರು" ಎಂಬ ವಿಷಯವನ್ನು ಕುರಿತು ಒಂದು ಉಪನ್ಯಾಸ ಮಾಡಿದೆ. ಆ ಉಪನ್ಯಾಸವೇ ತುಸು ವಿಸ್ತರಣಗೊಂಡು ಇಂದು ಈ ಪುಸ್ತಿಕೆಯ ರೂಪದಳೆದಿದೆ.

ಶಿವಶರಣರ ದೃಷ್ಟಿಯಿಂದ ಬಳ್ಳಾರಿ ಬಹು ಸಮೃದ್ಧವಾದ ಜಿಲ್ಲೆ. ಇಲ್ಲಿ ಬಸವಪೂರ್ವಯುಗದಿಂದ ಆಧುನಿಕ ಕಾಲದವರೆಗೆ ನಿರಂತರ ಶರಣರು ಹುಟ್ಟಿಬಂದಿದ್ದಾರೆ ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಅಸ್ತಿತ್ವದಲ್ಲಿ ಬಂದ 'ಶರಣ ಮಾರ್ಗ' ಎಲ್ಲಿಯೂ ಹರಿಗಡಿದಿಲ್ಲ ಇನ್ನೂರಕ್ಕೂ ಹೆಚ್ಚು ಶರಣರು ಈ ಭಾಗದಲ್ಲಿ ಜನ್ಮತಳೆದು ಈ ಮಾರ್ಗವನ್ನು ಜೀವಂತವಿಟ್ಟಿದ್ದಾರೆ.

ಶಾಸನಗಳಿಂದ, ಕಾವ್ಯಗಳಿಂದ ಚರಿತ್ರೆಗಳಿಂದ, ಜನಪದ ಕಥೆಗಳಿಂದ, ಜನರ ನಂಬಿಕೆಗಳಿಂದ, ವಚನಗಳಿಂದ ಹೀಗೆ ನಾನಾ ವಿಧಗಳಿಂದ ಈ ಶರಣರ ಸುಳುಹು ಹೊಳಹುಗಳನ್ನು ಅವರ ಕಾರ್ಯವಿಸ್ತಾರವನ್ನು, ಅವರ ಸಂದೇಶವನ್ನು, ನಡೆ-ನುಡಿಗಳನ್ನು ಹೆಕ್ಕಿ ಆರಿಸಿ ತೆಗೆಯಬೇಕಾಯಿತು. ನನ್ನ ಈ ಕಾರ್ಯದಲ್ಲಿ ನೆರವಾದವರು ಅನೇಕರು ಡಾ|| ಎಂ. ಎಂ ಕಲಬುರಗಿಮತ್ತು ಹಿರಿಯರಾದ, ಶ್ರೀ ಜೋಳದರಾಶಿ ಕೆ ದೊಡ್ಡನಗೌಡರನ್ನು ಮೊದಲು ನೆನೆಯಬೇಕು. ಬಹು ವಿಧದಿಂದ ಇವರು ನನಗೆ

ಸಹಾಯ ನೀಡಿದ್ದಾರೆ. ಹಿರಿಯರಾದ ಡಾ|| ವೈ ನಾಗೇಶ ಶಾಸ್ತ್ರಿಗಳು, ಶ್ರೀ ಕೆ. ಎಂ ಅಯ್ಯಪ್ಪಶಾಸ್ತ್ರಿಗಳು, ಶ್ರೀ ಸಿ. ವ. ಚೆನ್ನಬಸವೇಶ್ವರರು, ಸ್ನೇಹಿತರಾದ ಶ್ರೀ ಕೆ ವಿರುಪಾಕ್ಷಗೌಡರು, ಪ್ರೊ. ಪಂಚಾಕ್ಷರ ಸ್ವಾಮಿಯವರು, ಪ್ರೊ ವೈ. ಕೆ. ಚಂದ್ರಶೇಖರಪ್ಪನವರು, ಡಾ|| ವಿ ಶಿವಾನಂದರು, ಚೇಳ್ಳಗುರ್ಕಿ ಎರ್ರಿಸ್ವಾಮಿ ಮಠದ ಕಾರ್ಯದರ್ಶಿ ಶ್ರೀ ವಿರೂಪಾಕ್ಷಪ್ಪನವರು– ಇವರೆಲ್ಲರು ಈ ಶರಣರ ಜೀವನ ಅರಿಯಲು ನೆರವು ನೀಡಿದ್ದಾರೆ. ಇವರೆಲ್ಲರಿಗೆ ನನ್ನ ಅಂತಃಕರಣದ ಶರಣುಗಳು.

ರಾಯಚೂರು ಜಿಲ್ಲೆಯವನಾದ ನನಗೆ ಬಳ್ಳಾರಿ ಜಿಲ್ಲೆಯ ಶಿವಶರಣರನ್ನು ಕುರಿತು ಉಪನ್ಯಾಸ ಮಾಡಿ, ಪುಸ್ತಿಕೆ ಬರೆಯಲು ಹಚ್ಚಿದ-ಒಂದು ರೀತಿಯಿಂದ ಪರೀಕ್ಷೆಗೇ ಗುರಿ ಮಾಡಿದ-ಸಹೃದಯರಾದ ಶ್ರೀ ಚೆನ್ನವೀರ ಕಣವಿ ಮತ್ತು ಶ್ರೀ ಎಲ್. ಎಂ ಗುಡ್ಡೀನ ಅವರಿಗೆ ಏನೆನ್ನಲಿ? ಅವರ ಆತ್ಮೀಯತೆ ನನ್ನನ್ನು ಮುನ್ನಡೆಸಿತು ಅವರಿಗೆ ಮೌನದಿಂದ ಮಣಿವೆ.

ಈ ಜನಪ್ರಿಯ 'ಜ್ಞಾನದಾಸೋಹ' ದಲ್ಲಿ ನನಗೆ ಭಾಗ ವಹಿಸಲು ಅವಕಾಶ ಮಾಡಿಕೊಟ್ಟ ಕರ್ನಾಟಕ ವಿಶ್ವ ವಿದ್ಯಾಲಯದ ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ವಿಭಾಗದ ಎಲ್ಲ ಪ್ರಮುಖರಿಗೆ ನನ್ನ ನೆನಕೆಗಳು.

ರಾಯಚೂರು
೧೧-೧೧-೧೯೭೫

—ಶಾಂತರಸ

ಪರಿವಿಡಿ

ಬಳ್ಳಾರಿ ಜಿಲ್ಲೆ

(ಚಾರಿತ್ರಿಕ ಸ್ಥೂಲ ಪರಿಚಯ)

ಬಳ್ಳಾರಿ ಜಿಲ್ಲೆ ಅನೇಕ ವೈಶಿಷ್ಟ್ಯಗಳಿಂದ ಕೂಡಿದೆ. ಸಮೃದ್ಧವಾದ ನೆಲ, ಖನಿಜ ತುಂಬಿದ ಬೆಟ್ಟಗಳು, ಉಪಯುಕ್ತ ವೃಕ್ಷರಾಜಿಯ ಅಡವಿಗಳು, ತಾಯಿ ತುಂಗಭದ್ರೆಯ ಆಶ್ರಯ, ಆಶೀರ್ವಾದ— ಈ ಜಿಲ್ಲೆಯ ಸಂಪತ್ತನ್ನು, ಮೇಲ್ಮೆಯನ್ನು ಸಾರುತ್ತವೆ. ಇಲ್ಲಿಯ ವೀರಶ್ರೀ, ತತ್ತ್ವಶ್ರೀ, ಮತ್ತು ಶಿಲ್ಪಶ್ರೀ ಲೋಕ ಬೆರಗುಪಡುವಂಥವು. ಈ ನೆಲದ ಕೆಚ್ಚನ್ನು ನಚ್ಚನ್ನು ಉಂಡು ಬೆಳೆದ ಇಲ್ಲಿಯ ಮಕ್ಕಳು ಅದಮ್ಯ ಸಾಹಸಿಗಳಾಗಿ, ಅಷ್ಟೇ ಶಿವಮಯಜೀವನವುಳ್ಳವರಾಗಿ, ಸಕಲ ಜೀವರ ಲೇಸಿಗಾಗಿ ಬಾಳಿಬದುಕಿದ ಚರಿತ್ರೆ ರೋಮಾಂಚನೀಯವಾಗಿದೆ. ಅವರು ಕಟ್ಟಿದ ರಾಜ್ಯ-ಸಾಮ್ರಾಜ್ಯಗಳು, ರಚಿಸಿದ ಕಲೆ-ಕಾವ್ಯಗಳು, ನಿಲ್ಲಿಸಿದ ಮನೆ-ಮಂದಿರಗಳು ಪ್ರಪಂಚದ ಇತಿಹಾಸದಲ್ಲಿಯೇ ಗಣ್ಯವಾದುವುಗಳು. ಮಲ್ಲಿಗೆಯಾಗಿ ಅರಳಿದ, ಶ್ರೀಗಂಧವಾಗಿ

ಸವೆದ ಅವರ ಬಾಳಿನ ತನಿಗಂಪು ಇನ್ನೂ ಈ ವಾತಾವರಣ ದಲ್ಲಿ ಅಡಗಿದೆ.

ಈ ಜಿಲ್ಲೆಯ ಚರಿತ್ರೆ ಬಹು ಪುರಾತನವಾದುದು. ಮನುಷ್ಯ ಮೊದಲಿನಿಂದ ಜೀವಿಸಿದ ಭಾರತದ ಪ್ರದೇಶಗಳಲ್ಲಿ ಬಳ್ಳಾರಿಯ ಪ್ರದೇಶವೂ ಸೇರಿದೆ. ಪುರಾತನ ಶಿಲಾಯುಗ, ನವ ಶಿಲಾಯುಗ, ಕಬ್ಬಿಣದ ಯುಗ— ಸಂಸ್ಕೃತಿಯ ಈ ಎಲ್ಲ ಹಂತಗಳಲ್ಲಿ ಇಲ್ಲಿಯ ಮಾನವ ನಡೆದು ಬಂದ ಕುರುಹುಗಳು ಬಳ್ಳಾರಿ, ಕಪ್ಪಗಲ್ಲು, ಸಂಗನಕಲ್ಲು, ಗಾದಿಗನೂರು ಮೊದ ಲಾದ ಸ್ಥಳಗಳಲ್ಲಿ ನಡೆಸಿದ ಪ್ರಾಚ್ಯ ಶೋಧನೆಯಿಂದ ಕಂಡು ಬಂದಿವೆ.

ಪುರಾಣಯುಗದಲ್ಲಿಯೂ ಈ ಪ್ರದೇಶ ಬಹಳ ಮಹತ್ವ ವುಳ್ಳುದಾಗಿತ್ತು. ವಾಲಿ, ಸುಗ್ರೀವ, ಹನುಮಂತ ಮೊದಲಾದ ವೀರರು ಇದೇ ಪ್ರದೇಶದವರು. ಬ್ರಹ್ಮನ ಮಗಳಾದ ಪಂಪಾ ದೇವಿಯು ತಪಸ್ಸನ್ನಾಚರಿಸಿ ವಿರೂಪಾಕ್ಷನನ್ನು ಒಲಿಸಿಕೊಂಡ ಳಂತೆ; ಅದಕ್ಕಾಗಿ ಆ ಸ್ಥಳಕ್ಕೆ ಪಂಪಾಕ್ಷೇತ್ರವೆಂದು ಹೆಸರು ಬಂದಿತೆಂದು ಸ್ಥಳ ಪುರಾಣವಿದೆ.

ನಂದರ ಆಳಿಕೆಯಿಂದ ಈ ಪ್ರದೇಶದ ಚರಿತ್ರೆ ಪ್ರಾರಂಭ ವಾಗುತ್ತದೆ. ಕ್ರಿ. ಪೂ. ೪ ನೆಯ ಶತಮಾನದಲ್ಲಿ ನಂದರು ಈ ಪ್ರದೇಶವನ್ನು ಆಳಿದಂತೆ ಕೆಲವು ಅಸ್ಪಷ್ಟ ಸೂಚನೆಗಳು ದೊರಕುತ್ತವೆ. ಮೌರ್ಯರ ಕಾಲದಿಂದ ಈ ಪ್ರದೇಶದ

ಇತಿಹಾಸ ಖಚಿತವಾಗುತ್ತಾ ಹೋಗುತ್ತದೆ. ಶಾತವಾಹನರು, ಕದಂಬರು, ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟರು, ನೊಳಂಬರು, ಗಂಗರು, ಕಲ್ಯಾಣ ಚಾಳುಕ್ಯರು, ಪಾಂಡ್ಯರು, ಕಳಚುರ್ಯರು, ಹೊಯ್ಸಳರು ಮತ್ತು ಸೇವುಣರು ಈ ಪ್ರಾಂತವನ್ನಾಳಿದರು.

ಬಳ್ಳಾರಿ ಜಿಲ್ಲೆಯ ಕಂಪಿಲಿಯ ಇತಿಹಾಸ ಅತ್ಯಂತ ಉಜ್ವಲವಾದುದು. ಕಂಪಿಲದೇವ ಮತ್ತು ಆತನ ಮಗ ಕಡುಗಲಿ ರಾಮನಾಥ ಮಹಮ್ಮದ ತಘಲಕನ ಸೈನ್ಯದೊಡನೆ ಹೋರಾಡಿದ ಕಥೆ ವೀರಗಾಥವಾಗಿ ಉಳಿದಿದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದುದು ಅಚ್ಚ ಬಳ್ಳಾರಿ ಪ್ರದೇಶ ದಲ್ಲಿಯೇ.

ವಿಜಯನಗರ ಸಾಮ್ರಾಜ್ಯದ ತರುವಾಯ ಈ ಜಿಲ್ಲೆ ಬಳ್ಳಾರಿ, ಹರಪನಹಳ್ಳಿ, ಜರಮಲೆ ಮೊದಲಾದ ಪಾಳೆಯಗಾರರ ಆಡಳಿತಕ್ಕೆ ಒಳಪಟ್ಟಿತು. ಮುಂದೆ ಮರಾಠರು, ಮೊಗಲರು, ನಿಜಾಮರು ಈ ಪ್ರದೇಶವನ್ನಾಳಿದರು; ಕೆಲಕಾಲ ಹೈದರ್ ಮತ್ತು ಟಿಪ್ಪುಗಳ ಅಧೀನಕ್ಕೊಳಗಾಗಿ ಬ್ರಿಟಿಷರ ವಶವಾಯಿತು. ಕ್ರಿ. ಶ. ೧೭೯೯ರಲ್ಲಿ ಮದ್ರಾಸ ಪ್ರಾಂತದ ಒಂದು ಜಿಲ್ಲೆಯಾಯಿತು. ಸ್ವಾತಂತ್ರ್ಯ ಬಂದ ಬಳಿಕ ೧೯೫೩ ರಲ್ಲಿ ಆದವಾನಿ, ಆಲೂರು, ರಾಯದುರ್ಗ ತಾಲೂಕಗಳನ್ನುಳಿದು ಈ ಜಿಲ್ಲೆ ಹಳೆಯ ಮೈಸೂರಿಗೆ ಸೇರಿತು. ಆ ಬಳಿಕ ೧೯೫೬ ರಲ್ಲಿ

ವಿಶಾಲ ಕರ್ನಾಟಕ ರಾಜ್ಯದಲ್ಲಿ ವಿಲೀನವಾಯಿತು ಬಳ್ಳಾರಿ, ಶಿರಗುಪ್ಪ, ಸೊಂಡೂರು, ಹೊಸಪೇಟೆ, ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ, ಮಲ್ಲಾಪುರ ಮತ್ತು ಹಗರಿಬೊಮ್ಮನಹಳ್ಳಿ— ಈ ಒಂಬತ್ತು ತಾಲೂಕಗಳನ್ನೊಳಗೊಂಡ ಬಳ್ಳಾರಿ ಜಿಲ್ಲೆ ಕರ್ನಾಟಕದ ಮಹತ್ವದ ಜಿಲ್ಲೆ ಎನಿಸಿದೆ.

ಬಳ್ಳಾರಿ ಜಿಲ್ಲೆ ಚಿತ್ರ, ಶಿಲ್ಪ, ಸಾಹಿತ್ಯ, ಸಂಸ್ಕೃತಿಗೆ ಪ್ರಪಂಚ ಪ್ರಖ್ಯಾತಿ ಪಡೆದಿದೆ. ಕಪ್ಪಗಲ್ಲ-ಗುಡ್ಡದ ಉತ್ತರ ಭಾಗದಲ್ಲಿ ಮನುಷ್ಯರ ಮತ್ತು ಪಶುಪಕ್ಷಿಗಳ ಕೆಲವು ಇತಿಹಾಸ ಪೂರ್ವದ ಕೆತ್ತನೆಗಳನ್ನು ಕಂಡುಹಿಡಿಯಲಾಗಿದೆ. ಹಂಪೆ ಮತ್ತು ಉಜ್ಜಯಿನಿ ಶಿಲ್ಪಕ್ಕೆ ಹೆಸರಾಗಿವೆ ಹಂಪೆಯ ವಿರೂಪಾಕ್ಷ ಮಂದಿರದ ಒಳಛತ್ತಿನಲ್ಲಿ ಸುಂದರ ವರ್ಣಚಿತ್ರಗಳಿವೆ.

ಬಳ್ಳಾರಿ ಜಿಲ್ಲೆಯ ಸಾಹಿತ್ಯ ವಿಪುಲವಾಗಿದೆ. ವಿಜಯನಗರ ಕಾಲವಂತೂ ಸಾಹಿತ್ಯದ ಸುಗ್ಗಿಯೆನಿಸಿದೆ. ಹರಿಹರ, ರಾಘವಾಂಕ, ಚಾಮರಸ, ಕುಮಾರವ್ಯಾಸ ಶ್ರೀನಾಥ, ಲಕ್ಕಣ್ಣ ದಂಡೇಶ, ಗಂಗಾದೇವಿ, ಚಾಟುವಿಠ್ಠಲನಾಥ ಮುಂತಾದ ನೂರಾರು ಕವಿಗಳು ಇಲ್ಲಿ ಬಾಳಿ ಬೆಳಗಿದರು.

ಈ ಪ್ರದೇಶ ಹರಿದಾಸರಿಗೂ ಪ್ರಸಿದ್ಧವಾಗಿದೆ; ದಾಸಕೂಟ ಪ್ರಾರಂಭವಾದುದು ಇಲ್ಲಿಯೇ ಸಂಗೀತದಲ್ಲಿಯೂ ಈ ಸೀಮೆ ಹೆಸರು ಗಳಿಸಿದೆ. ಕಲ್ಲಿನಾಥ, ಪುಂಡಲೀಕ ವಿಠ್ಠಲ, ಪುರಂದರ

ದಾಸ, ಮೈಲಾರದ ಬಸವಲಿಂಗಶರಣ ಮುಂತಾದವರು ಸಂಗೀತ ಬೆಳೆಸಿ ಉಳಿಸಿದ್ದಾರೆ.

* * * *

ಬಳ್ಳಾರಿ ಜಿಲ್ಲೆಯ ಶಿವಶರಣರ ಚರಿತ್ರೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಇಲ್ಲಿ ಇನ್ನೂರಕ್ಕೂ ಮಿಕ್ಕಿ ಶರಣರಿದ್ದಾರೆ. ಅವರೆಲ್ಲರ ಜೀವನ, ತತ್ತ್ವದರ್ಶನ ವಿವರವಾಗಿ ಹೇಳಲು ಸ್ಥಳ ಸಾಲದು. ಆದುದರಿಂದ ಎಲ್ಲ ಶರಣರ ಕಾಲಾನುಕ್ರಮದಲ್ಲಿ ಹೆಸರು ನಿರ್ದೇಶನ ಮಾಡಿ, ಕೆಲವರ ಚರಿತ್ರೆಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಹಿಂದೆ ಆದವಾನಿ, ಆಲೂರು ಮತ್ತು ರಾಯದುರ್ಗ ಬಳ್ಳಾರಿ ಜಿಲ್ಲೆಯಲ್ಲಿಯೇ ಇದ್ದುದರಿಂದ ಆ ತಾಲೂಕಗಳ ಶಿವಶರಣರನ್ನೂ ಈ ಪುಸ್ತಿಕೆಯಲ್ಲಿ ಸೇರಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ಶಿವಶರಣರು

ಬಸವ ಪೂರ್ವ ಯುಗ

ಮೂರು ಜಾವಿ ಪಂಡಿತ ಕ್ರಿ. ಶ. ೧೦೫೯

ಬಳ್ಳೇಶ ಮಲ್ಲಯ್ಯ ಕ್ರಿ ಶ. ೧೧೪೦

ಬಸವ ಯುಗ

ಮರುಳಸಿದ್ಧ ಕ್ರಿ. ಶ. ೧೧೬೨

ಬಸವೋತ್ತರ ಯುಗ

ಕುರುಗೋಡು ರಾಜಮಲ್ಲ ಕ್ರಿ. ಶ. ೧೧೮೭-೧೧೮೪

ಹಂಪೆಯ ಮಾಯಿದೇವ ಕ್ರಿ. ಶ. ೧೨೩೦

ಹರಿಹರ ,, ೧೨೩೦

ರಾಘವಾಂಕ ,, ೧೨೩೦

ಕಾಶೀವಿಲಾಸ ಕ್ರಿಯಾಶಕ್ತಿ ದೇವರು ,, ೧೩೩೬

ಮುಳೆಯ ಮಲ್ಲೇಶ್ವರ	ಕ್ರಿ. ಶ. ೧೪೩೫
ಮಹಲಿಂಗದೇವ	,, ೧೪೩೫
ಲಕ್ಕಣ್ಣ ದಂಡೇಶ ಹೇಳುವ ನೂತನ ಶರಣರು	,, ೧೨೦೦–೧೪೫೦
ಕುಮಾರ ಬಂಕನಾಥ	,, ೧೪೩೦
ಜಕ್ಕಣ್ಣ	,, ೧೪೩೦
ಲಕ್ಕಣ್ಣ ದಂಡೇಶ	,, ೧೪೩೦
ಕಲ್ಲುಮಠದ ಪ್ರಭುದೇವ	,, ೧೪೩೦
ಚಾಮರಸ	,, ೧೪೩೦
ಮಗ್ಗೆಯ ಮಾಯಿದೇವ	,, ೧೪೩೦
ನೂರೊಂದು ವಿರಕ್ತರು	,, ೧೪೩೦
ಹೊಸಕೋಟೆ ಚೆನ್ನವೀರೇಶ	,, ೧೫೦೦
ಹಂಪಸಾಗರ ಚೆನ್ನವೀರೇಶ	,, ೧೫೦೦
ಗವಿ ಸಿದ್ಧೇಶ್ವರ	,, ೧೫೦೦

ಹೊನ್ನಯ್ಯ	ಕ್ರಿ. ಶ	೧೫೨೦
ಎಮ್ಮೆ ಬಸವ	,,	೧೫೪೨
ವಿರೂಪಾಕ್ಷ ಪಂಡಿತ	,,	೧೫೮೪
ಕೊಟ್ಟೂರ ಬಸವೇಶ್ವರ	,,	೧೫೯೦
ಕೊಟ್ಟೂರ ಲಿಂಗಮ್ಮ	,,	೧೫೯೦
ನಿರ್ವಾಣೇಶ್ವರ	,,	೧೫೯೦
ಗೋಣಿ ಬಸವೇಶ್ವರ	,,	೧೫೯೦
ಹರಪನಹಳ್ಳಿ ಕೆಂಪಯ್ಯ	,,	೧೫೯೦
ಹರಪನಹಳ್ಳಿ ಕೋಲಶಾಂತಯ್ಯ	,,	೧೫೯೦
ನಾಯ್ಕನಹಟ್ಟಿ ತಿಪ್ಪೇಸ್ವಾಮಿ	,,	೧೫೯೦
ಚಿಕ್ಕಣ್ಣ ಶರಣ ಅಥವಾ ಮೋಳಿಗೆ ಚಿಕ್ಕಯ್ಯ	,,	೧೫೯೦
ಮುದ್ದಾನೆಯ ಸಿದ್ಧಲಿಂಗಯ್ಯ	,,	೧೫೯೦
ಕೌದಿ ಮಹಾಂತೇಶ್ವರ (ಬಾಚಿಗೊಂಡನಹಳ್ಳಿ)	,,	೧೬೨೨

ಯಾದವಗಿರಿ ಶೂನ್ಯಪೀಠದ
ಗುರುಸಿದ್ಧಸ್ವಾಮಿ ಆದವಾನಿ ಕ್ರಿ. ಶ. ೧೬೭೫

ಯಾದವಗಿರಿ ಶಿವಾನುಭವ ಚರಪೀಠಾಧಿಪ
ಹಿರಿಯ ರಾಯಚೋಟಿಸ್ವಾಮಿ ಆದವಾನಿ ,, ೧೬೯೦

ಬಳ್ಳಾರಿಯ ರಾಘವಾಂಕಸ್ವಾಮಿ ,, ೧೬೯೦

ಚಿದಾನಂದಾವಧೂತ ,, ೧೭೫೦

ಲಿಂಗನಾಯ್ಕನಹಳ್ಳಿ ಚೆನ್ನವೀರೇಶ ,, ೧೭೬೦

ಕುರುಗೋಡು ದೊಡ್ಡಬಸವ ,, ೧೭೭೦

ಕುರುಗೋಡು ನೀಲಮ್ಮ ,, ೧೭೭೦

ಗದ್ದಿಕೆರೆ ದೊಡ್ಡಬಸಪ್ಪ ,, ೧೭೭೦

ಸಿದ್ಧಮಲ್ಲಯ್ಯ ,, ೧೭೭೦

ಮಾರಿಸ್ವಾಮಿ ,, ೧೭೭೦–೧೮೪೨

ಸಕ್ಕರಿ ಕರಡೆಪ್ಪ ,, ೧೮೭೫ (ಲಿಂಗೈಕ್ಯ)

ಮೈಲಾರ ಬಸವಲಿಂಗ ಶರಣ ,, ೧೭೮೦–೧೮೫೦

ಊಡೆಗೋಳ ಮದ್ದಾನೇಶ್ವರ	ಕ್ರಿ. ಶ. ೧೮ ನೇ ಶತಮಾನ
ಚಿತ್ವಾಡಿ ಕಲ್ಮಠೇಶ್ವರ	,, ೧೮ ನೇ ಶತಮಾನ
ಕಾನಾಮಡು ಶರಣಪ್ಪ	,, ೧೮೦೦
ಗಾದಿಲಿಂಗಪ್ಪ ಗೂಳ್ಯ	,, ೧೮೦೦
ಎಮ್ಮಿಗನೂರು ಜಡೆಸಿದ್ಧೇಶ್ವರ	,, ೧೮೦೯-೧೮೯೯
ದೇವಸಮುದ್ರದ ಪರಮೇಶ್ವರಪ್ಪ	,, ೧೮೧೩ (ಲಿಂ.)
ಹಾಲ್ವಿ ಮಹಾಂತಸ್ವಾಮಿ	,, ೧೮೮೬
ಕುಡತಿನಿ ನಯನಸ್ವಾಮಿ	ಸು. ೧೯ ನೇ ಶತಮಾನ
ಬಾವಿಹಳ್ಳಿ ಕರಿಬಸವೇಶ್ವರ	,, ,,
ಅಳಿಕೋಳಿ ಮರಿಸ್ವಾಮಿ	,, ,,
ಸಿರಿಗೇರಿ ಸಲವಪ್ಪ	,, ,,
ಸಿಂದಿಗೇರಿ ಮಲ್ಲಪ್ಪ	ಕ್ರಿ. ಶ. ೧೯ನೇ ಶತಮಾನ
ಬಸವಪ್ಪ ಬಳ್ಳಾರಿ	,, ೧೮೫೦

ಎರ್ರಿತಾತ	ಕ್ರಿ. ಶ. ೧೮೯೭ (ಚೇಳ್ಳಗುರ್ಕಿಗೆ ಆಗಮನ)
ಜೊಕ್ಕದಚೀಡು ಲಿಂಗಪ್ಪ	,, ೧೯೦೮
ಗಡಿಗಿ ಪರಪ್ಪ	,, ೧೯೨೨ (ಲಿಂ.)
ತಿಕ್ಕಯ್ಯ	,, ೧೯೦೦
ಶಿವರಾಮಾವಧೂತ	,, ೧೯೦೦
ಮುಷ್ಟೂರು ಹುಚ್ಚಪ್ಪಸ್ವಾಮಿ	೨೦ ನೇ ಶತಮಾನ ಪೂರ್ವಾರ್ಧ
ಆದವಾನಿ ಲಕ್ಷ್ಮಮ್ಮ	,, ,,
ಕರಡಿಗುಡ್ಡದ ಮಂಗಮ್ಮ	,, ,,
ದಮ್ಮೂರ ವೆಂಕಪ್ಪ	,, ,,

ಮೂರು ಜಾವಿ ಪಂಡಿತ

(ಕ್ರಿ. ಶ. ೧೦೫೯)

ಕನ್ನಡ ನಾಡಿನಲ್ಲಿ ಅನೇಕ ಮೂರು ಜಾವದ ದೇವರಿದ್ದಾರೆ. ಕ್ರಿ. ಶ. ೧೨೩೮ರ ರಟ್ಟೆಹಳ್ಳಿ ಶಾಸನದಲ್ಲಿ ಇಬ್ಬರು ಮೂರು ಜಾವಿ ದೇವರ ಉಲ್ಲೇಖವಿದೆ. ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣದಲ್ಲಿ ಒಬ್ಬ ಮೂರು ಜಾವದ ದೇವನ ವರ್ಣನೆ ಇದೆ; ಆತ ಏಕಾಂತ ರಾಮಯ್ಯನ ಸಮಕಾಲೀನ.

ಬಳ್ಳಾರಿ ಜಿಲ್ಲೆಯ ಮೂರು ಜಾವಿ ಪಂಡಿತ ಬಸವಪೂರ್ವಯುಗದವ. ಈತನನ್ನು ಕುರಿತು ಬಳ್ಳಾರಿ ಜಿಲ್ಲೆಯ ಹಿರೇ ಮುಗಲಗೇರಿಯಲ್ಲಿ ಒಂದು ಶಾಸನವಿದೆ. *

ಆರಿಯ ದೇವರ ಶಿಷ್ಯನಾದ ಈ ಮೂರು ಜಾವಿ ಪಂಡಿತ ಸ್ವಯಂಭು ತ್ರಿಕುಟೇಶ್ವರ ಮಠದ ಆಚಾರ್ಯನಾಗಿದ್ದ. ಈತನ ಪಾದ ತೊಳೆದು ಸ್ವಯಂಭು ದೇವರ ನೈವೇದ್ಯಕ್ಕೆ ಶಕವರ್ಷದ ೯೮೧ನೆಯ ವಿಕಾರಿ ಸಂವತ್ಸರದ ಶ್ರಾವಣದ ಹುಣ್ಣಿಮೆಯ ಮಂಗಳವಾರದ ದಿನ ಸೋಮಗ್ರಹಣ ನಿಮಿತ್ತದಿಂದ ದತ್ತಿಬಿಟ್ಟ ವಿವರವನ್ನು ಈ ಶಾಸನ ವರ್ಣಿಸುತ್ತದೆ.

---

* ಡಾ| ಎಂ. ಎಂ. ಕಲಬುರ್ಗಿ :
ಶಾಸನಗಳಲ್ಲಿ ಶಿವಶರಣರು, ಪುಟ ೧೮೩

ಬಳ್ಳೇಶ ಮಲ್ಲಯ್ಯ

(ಕ್ರಿ. ಶ. ೧೧೪೦)

ಬಳ್ಳೇಶ ಮಲ್ಲಯ್ಯ ಬಸವ ಪೂರ್ವದ ಶರಣನೆಂಬುದು ಬಸವ ಪುರಾಣದಿಂದ ತಿಳಿದುಬರುತ್ತದೆ.

ಈತ ಮೊದಲಿಗೆ ಜೈನ. ಹೇರಿನ ಕಾಯಕ ಕೈಕೊಂಡಿದ್ದ. ತನ್ನ ಭಾವ ಮೈದುನರೊಡನೆ ಹೇರನ್ನು ಸಾಗಿಸುತ್ತಿದ್ದ. ಆತನಿಗೆ ಜೈನಧರ್ಮ ಬೇಡವಾಯಿತು. ವೀರಶೈವಾಚಾರವನ್ನು ಸ್ವೀಕರಿಸಿದ. ಇದು ಭಾವ ಮೈದುನರಿಗೆ ಸರಿ ಬರಲಿಲ್ಲ

ಎಲ್ಲಿಯೇ ಇರಲಿ ಶಿವಲಿಂಗಪೂಜೆ ಮಾಡದೆ ಮಲ್ಲಯ್ಯ ಪ್ರಸಾದ ಸೇವಿಸುತ್ತಿರಲಿಲ್ಲ. ಒಮ್ಮೆ ಹೇರು ಸಾಗಿಸುವಾಗ ಆತನಿಗೆ ಕಣ್ಣುಬೇನೆ ಬಂದು ಕಣ್ಣು ಕಾಣದಂತಾದುವು. ಲಿಂಗಪೂಜೆ ನಿಂತಿತು; ಊಟವಿಲ್ಲದಂತಾಯಿತು ಇದನ್ನು ಕಂಡು ಭಾವ ಮೈದುನರು "ಜೀವಮಂ ತ್ಯಜಿಸುವಂ ಗಡ ಭಾವ" ನೆಂದು ಕುಟಿಲ ಮನಸ್ಸಿನ ಗಾವಿಲರು ಹುಲ್ಲಿನ ಒಂದು ಮಂಟಪವನ್ನು ಕಟ್ಟಿ ಅದರಲ್ಲಿ ಅಳೆಯುವ ಬಳ್ಳ (ಸೇರು) ವನ್ನು ತಂದಿರಿಸಿದರು. ಶಿವಲಿಂಗ ಮಂದಿರವಿಲ್ಲಿದೆ ಬನ್ನಿ ಎಂದು ಭಾವನನ್ನು ಕರೆತಂದರು. ಮಲ್ಲಯ್ಯ ಭಕ್ತಿಯಿಂದ ಶಿವಾಯ

ಗೌರೀವಲ್ಲಭಾಯ ಎನ್ನುತ್ತ ಲಿಂಗ(ಬಳ್ಳ)ವನ್ನು ಪೂಜಿಸಿ, ಜೋಡಿಗೆ ಬಂದು ಪ್ರಸಾದ ಸೇವಿಸಿದ. ಆಗ ಆ ಹೇರಿನ ಸೆಟ್ಟಿಗಳು "ಮಲ್ಲಿಭಾವ ಲಿಂಗವೆಂದು ಬಳ್ಳವನ್ನು ಪೂಜಿಸಿದ; ಅಡ್ಡಬಿದ್ದ; ಹೊಟ್ಟೆಬಿರಿವಂತೆ ಉಂಡ; ಹುಲ್ಲು ಗುಡಿಸಲಲ್ಲಿಯ ಬಳ್ಳ ತನ್ನಿದೋ ಆಳಿಯಲಿಕ್ಕೆ; ಹಸಿವಿಗೆ, ಆಪತ್ತಿಗೆ ಅದುದೇ ದೈವ" ಎಂದು ಕಟಕಿಯಾಡಿ ನಕ್ಕರು. ಅದನ್ನು ಕೇಳಿ, "ಎಲವೋ ಅದು ಬಳ್ಳವಲ್ಲ, ಸಾಕ್ಷಾತ್ ಶಿವಲಿಂಗ, ನಡೆಯಿರಿ ತೋರಿಸುವೆ" ಎಂದು ಮಲ್ಲಯ್ಯ ಅವರೊಡಗೂಡಿ ಅಲ್ಲಿಗೆ ಬಂದನು. ಹುಲ್ಲು ಮಂಟಪ ದಿವ್ಯ ಮಂದಿರವಾಗಿತ್ತು; ಬಳ್ಳ ಲಿಂಗವಾಗಿತ್ತು. ಆ ಲಿಂಗವೇ ಬಳ್ಳೇಶ್ವರ ಲಿಂಗವೆಂದು ಹೆಸರು ಪಡೆಯಿತು.

ಈ ಪವಾಡ ಬಳ್ಳಾರಿಯ ಹತ್ತಿರ ನಡೆಯಿತು. ಅದಕ್ಕೆಂತಲೇ ಆ ಸ್ಥಳಕ್ಕೆ ಬಳ್ಳ+ಅರೆ (ಬಳ್ಳವಿದ್ದ ಕಲ್ಲುಬಂಡೆ) ಬಳ್ಳಾರಿ ಎಂದು ಹೆಸರಾಯಿತೆಂದು ಸ್ಥಳಪುರಾಣವಿದೆ. ಬಳ್ಳಾರಿಯ ಕೋಟೆಯಲ್ಲಿ 'ಮಲ್ಲೇಶ್ವರ' ಎಂಬ ಶಿವಾಲಯವಿದೆ. ಅದರ ಪ್ರಾಕಾರದಲ್ಲಿ ಮಲ್ಲಿಸೆಟ್ಟಿ ಬಳ್ಳವನ್ನು ಪೂಜಿಸಿ ಅದು ಲಿಂಗವಾದ ಚಿತ್ರವನ್ನು ಕೊರೆಯಲಾಗಿದೆ.

ಬಳ್ಳೇಶ ಮಲ್ಲಯ್ಯ ವಚನಕಾರನಾಗಿದ್ದಾನೆ. ಆತನ ಅಂಕಿತ "ಬಳ್ಳೇಶ್ವರ." ಆತನ ಏಳು ವಚನಗಳು ದೊರಕಿವೆ. ಇವುಗಳಲ್ಲಿ ಆರು ಬೆಡಗಿನ ವಚನಗಳಿವೆ ಈ ವಚನಗಳ ಭಾವ ಧಾಟಿ ನೋಡಿದರೆ ಬಳ್ಳೇಶ ಮಲ್ಲಯ್ಯ ಬಸವಣ್ಣನವರ

ಹರಿಯ ಸಮಕಾಲೀನನಾಗಿ ಜೀವಿಸಿರಬೇಕು ಎನಿಸುತ್ತದೆ. ಈತನ ವಚನಗಳಲ್ಲಿ ಯಾವ ಶರಣರ ಹೆಸರೂ ಬರುವುದಿಲ್ಲ. ಈತನ ಬೆಡಗಿನ ವಚನಗಳು ಬಹು ಅರ್ಥಗರ್ಭಿತವಾಗಿವೆ.

ಮರುಳಸಿದ್ಧ

(ಕ್ರಿ. ಶ. ೧೧೬೨)

ಮರುಳಸಿದ್ಧ ಉಜ್ಜಯಿನಿ ಪೀಠದ ಮೂಲಪುರುಷನೆಂದು ಹೇಳುತ್ತಾರೆ ಆತನ ಚರಿತ್ರೆ ಎಲ್ಲ ಕಾವ್ಯಗಳಲ್ಲಿ ಒಂದೇ ರೀತಿಯಾಗಿಲ್ಲ. ಆದರೆ ಆತ ಉಜ್ಜಯಿನಿ ಪೀಠದ ಮೂಲ ಪುರುಷನೆಂಬಲ್ಲಿ ಭಿನ್ನಾಭಿಪ್ರಾಯವಿಲ್ಲ ಮರುಳಸಿದ್ಧ ಚಾರಿತ್ರ ಆತ ಸಾಮಾನ್ಯನಂತೆ ಹುಟ್ಟಿ ಅಸಾಮಾನ್ಯನಾಗಿ ಮೆರೆದನೆಂದು ಹೇಳುತ್ತದೆ.

ಶಿಲಾದಮುನಿಯ ಹೆಂಡತಿ ಸುಪ್ರಭೆ ಶಾಪಗ್ರಸ್ತಳಾಗಿ ಕಗ್ಗಲ್ಲಪುರದಲ್ಲಿ ಕೂಚಿಯಾಗಿ ಹುಟ್ಟಿ ಮಾದಿಗ ಮಾರನ ಹೆಂಡತಿಯಾದಳು. ಈ ಮಾರ ಮತ್ತು ಕೂಚಿಯರ ಮಗನೇ ಮರುಳಸಿದ್ಧ. ಚಿಕ್ಕಂದಿನಲ್ಲಿ ಇವನು ದನಕಾಯುತ್ತಿದ್ದ.

ಮುಂದೆ ಅನೇಕ ಪವಾಡಗಳನ್ನು ಮಾಡಿದನು. ಹಳೇ ಬೀಡು, ಓರಂಗಲ್ಲು, ಕಲ್ಯಾಣ ಮುಂತಾದ ರಾಜಧಾನಿಗಳನ್ನು ಸುತ್ತಾಡಿದನು. ಕೊಲ್ಲಾಪುರದ ಹತ್ತಿರವಿರುವ ಸಿದ್ಧಗಿರಿಯಲ್ಲಿ ರೇವಣಸಿದ್ಧನಿಂದ ವೀರಶೈವ ದೀಕ್ಷೆ ಪಡೆದನು. ಕೊಲ್ಲಾಪುರ ದೈತ್ಯೆ ಮಹಾಮಾಯಿ ನೀಡಿದ ಹಾಲಾಹಲ ಸೇವಿಸಿ ಆಕೆಯ ಮೊಲೆ ಮೂಗು ಕೊಯ್ದನು; ಆಕೆಯ ಬೇಡಿಕೆಯಂತೆ ಅವಳ ಅವಯವಗಳನ್ನು ವೀಣೆ ಮಾಡಿ ಬಾರಿಸಿ ಭೂತಗಳನ್ನು ಕುಣಿಸಿದನು. ಸೊಲ್ಲಾಪುರಕ್ಕೆ ಹೋಗಿ ಸಿದ್ಧರಾಮನನ್ನು ಕಂಡನು. ಬಳ್ಳಾರಿ ಜಿಲ್ಲೆಯ ಉಜ್ಜಯಿನಿಗೆ ಬಂದು ನೆಲಿಸಿದನು.

ಮತ್ತೆ ಅನೇಕ ಕಡೆ ಸಂಚರಿಸಿದನು. ಬಾಲಕನಾಗಿ, ಯುವಕನಾಗಿ, ವೃದ್ಧನಾಗಿ ಪವಾಡಮಾಡಿ ಜನರನ್ನು ಉದ್ಧರಿಸಿದನು. ದಾವಣಗೆರೆ ತಾಲೂಕಿನ ಕುದುಡಿ ಎಂಬ ಊರಲ್ಲಿ ಎಲ್ಲ ಜಾತಿಯ ಹುಡುಗರು ತಂದ ಬುತ್ತಿಗಳನ್ನು ಒತ್ತಟ್ಟಿಗೆ ಕೂಡಿಸಿ ಮತ್ತೆ ಎಲ್ಲರಿಗೆ ಹಂಚುತ್ತಿದ್ದನು. ಇದರಿಂದ ವಿಪ್ರರು ಬೊಬ್ಬೆಗೆದ್ದು, ಆತನನ್ನು ಒಂದು ಹಗೆಯಲ್ಲಿ ದೂಡಿ ಸುಣ್ಣದ ನೀರನ್ನು ಹೊಯ್ದರು. ಆದರೆ ಮರುಳಸಿದ್ಧನಿಗೆ ಏನೂ ಅಪಾಯವಾಗಲಿಲ್ಲ.

ಬೇತೂರು ಎಂಬ ಹಳ್ಳಿಯಲ್ಲಿ ಬ್ರಾಹ್ಮಣರು ಯಜ್ಞ ಮಾಡುತ್ತಿದ್ದರು. ಆಗ ಮರುಳಸಿದ್ಧ ಪ್ರಾಣಿವಧೆ ಧರ್ಮವಿರುದ್ಧವೆಂದು ಹೇಳಿ ಅವರನ್ನು ಜರೆದನು. ಅವರು ಕುಪಿತರಾಗಿ ಅವನ

ಕೈಕಾಲುಗಳನ್ನು ಬಂಧಿಸಿ ಅಣಬೆ ಕೆರೆಯಲ್ಲಿ ಒಗೆದರು. ಆದರೆ ಮರುಳಸಿದ್ಧನಿಗೆ ಏನೂ ಆಗಲಿಲ್ಲ.

ಕಾಶೀ, ಕೇದಾರ, ದ್ರಾಕ್ಷಾರಾಮ, ಶ್ರೀಶೈಲ, ಹಂಪೆ, ಗೋಕರ್ಣ ಮುಂತಾದ ಸ್ಥಳಗಳಲ್ಲಿ ಕೈಯಲ್ಲಿ ಕೊಡಲಿ ಹಿಡಿದು ಸಂಚಾರಮಾಡಿದನು. ಕಗ್ಗಲ್ಲ ರೇವು ಗೌಡನಿಗೆ ಮಕ್ಕಳಿರಲಿಲ್ಲ. ಆತನಿಗೆ ಮಗುವಾಗಿ ಸಿಕ್ಕು ಕೊಡ ಕೊಡ ಹಾಲು ಕುಡಿದು, ಮೂರು ವರ್ಷದಲ್ಲಿಯೇ ಯುವಕನಾಗಿ ಕಗ್ಗಲ್ಲ ರೇವುಗೌಡನಿಗೆ ಇಷ್ಟಾರ್ಥಗಳನ್ನಿತ್ತು ಉಜ್ಜಯನಿಗೆ ಬಂದು ಲಿಂಗೈಕ್ಯನಾದನು.

ಮರುಳಸಿದ್ಧನ ಜೀವನವನ್ನು ಬಗೆದು ನೋಡಿದರೆ ಅವನೊಬ್ಬ ಕ್ರಾಂತಿಪುರುಷನೆಂದು ತಿಳಿಯುತ್ತದೆ. ಕುಲಗೋತ್ರ ಜಾತಿಮತಗಳನ್ನು ಅಲ್ಲಗಳೆದು ಸರ್ವಸಮಾನತೆ ತಂದ ಕಾಲ ಹನ್ನೆರಡನೆಯ ಶತಮಾನ ಆ ಕಾಲದ ಪ್ರತೀಕ, ಪ್ರತಿನಿಧಿ ಮರುಳಸಿದ್ಧ. ಹುಟ್ಟಿದ್ದು ಮಾದಿಗರ ಕುಟುಂಬದಲ್ಲಿ. ಆದರೆ ಹುಟ್ಟು ಉತ್ತಮಿಕೆಗೆ ಅಡ್ಡ ಬರುವುದಿಲ್ಲವೆಂದು ಆತ ತಾನು ಏರಿದ ಎತ್ತರದಿಂದ ಸಾಧಿಸಿದ ಆಧ್ಯಾತ್ಮದಿಂದ ತೋರಿಸಿಕೊಟ್ಟ. ಬಾಲಕರ ಬುತ್ತಿ ಒಟ್ಟು ಗೂಡಿಸಿ ಸರ್ವರಿಗೂ ಹಂಚಿದ ಘಟನೆ, ಅದೊಂದು ಮರುಳಸಿದ್ಧ ಸರ್ವಸಮಾನತೆ. ಈ ನಾಡಿನಲ್ಲಿ ಬಿತ್ತಿದ ಕುರುಹು. ಅದು ಕೂಡ ಎಳೆಯ ಬಾಲರಲ್ಲಿ ಈ ಭಾವನೆ ಮೊಳೆತರೆ ಮುಂದೆ ಅದು ಸಾರ್ವತ್ರಿಕವಾಗಿ ಬೆಳದು ಹಬ್ಬಿ ಹರಡುವುದೆಂದು ಆತ ಬಗೆದಿದ್ದಂತೆ ಕಾಣುತ್ತದೆ.

ಬ್ರಾಹ್ಮಣರು ಮಾಡುವ ಯಜ್ಞ ವಿರೋಧಿಸಿದ ಘಟನೆ ಆತನ ಬದುಕಿನಲ್ಲಿ ಇನ್ನೊಂದು ಮಹತ್ವದ ಘಟನೆ. ಪ್ರಾಣಿ ಹಿಂಸೆ ಸಲ್ಲದು; ಅಗ್ನಿ ದೇವರಲ್ಲ, ತಿನ್ನುವ, ಉಡುವ ವಸ್ತುಗಳನ್ನು ಅದರಲ್ಲಿ ಹಾಕಿ ಹಾಳು ಮಾಡಬಾರದು ಮತ್ತು ಕರ್ಮ, ಕರ್ಮಠತನ ದೇವರನ್ನೊಲಿಸುವ ಮಾರ್ಗವಲ್ಲ ಎಂಬುದನ್ನು ಈ ಘಟನೆಯಿಂದ ಆತ ಜನರಿಗೆ ಮನದಟ್ಟು ಮಾಡಿಕೊಟ್ಟನು.

ಕೊಲ್ಲಾಪುರದ ಮಾಯಿ ದೈತ್ಯೆ ಮಹಾಸಿದ್ಧಿಯುಳ್ಳಾಕೆ. ಈ ಸಿದ್ಧಿಗಳು ಮಾನವಜೀವನಕ್ಕೆ ಒಳ್ಳೆಯವಲ್ಲ; ಇವುಗಳಿಂದ ಲಿಂಗಾಂಗ ಸಾಮರಸ್ಯ ಸಾಧಿಸವು. ಅಲ್ಲದೆ ಇವು ಮಾನವರನ್ನು ತಪ್ಪು ದಾರಿಗೆಳೆದು ಅವರ ಬಾಳಿನಲ್ಲಿ ಅಜ್ಞಾನ, ಅನಾಚಾರ ಬಿರಿಸುವುವು. ಆದುದರಿಂದ ಮರುಳಸಿದ್ಧ ಆ ಮಾಯಿಯನ್ನು-ಎಂದರೆ ಸಿದ್ಧಿಯ ತಾಯಿ ಬೇರನ್ನು ಕಿತ್ತೆಸೆದನು. ಸಿದ್ಧಿಯನ್ನು ಅಲ್ಲಗಳೆದರಷ್ಟೇ ಸಾಲದು; ಆ ಸಿದ್ಧಿಗೆ ಒಳಗಾದವರ ಹೃದಯ ಗಳನ್ನು ಶುದ್ಧಮಾಡಬೇಕು. ಆ ಕೆಲಸವನ್ನು ಮರುಳಸಿದ್ಧ ಮಾಡಿ ಶುದ್ಧ ಭಕ್ತಿ ಮತ್ತು ಶಿವಾಚಾರಗಳನ್ನು ಜನರಿಗೆ ಕಲಿಸಿಕೊಟ್ಟನು ಹೀಗೆ ಮರುಳಸಿದ್ಧನ ಜೀವನ ಬಹಳ ಮಹತ್ವ ಪುಳ್ಳುದಾಗಿದೆ. ಕಲ್ಯಾಣದ ಶರಣರು ಹಮ್ಮಿಕೊಂಡ ಮಹಾ ಮಣಿಹಕ್ಕೆ ಈತ ತಾನು ತನ್ನ ಜೀವನ ಮೀಸಲಿಟ್ಟು ಹೋರಾಡಿ ದ್ದಾನೆ ಎಂದು ಹೇಳಬಹುದು. ಈ ಹಿನ್ನೆಲೆಯಿಂದ ನೋಡಿ ದಾಗ ಆತ ಸ್ಥಾಪಿಸಿದ ಉಜ್ಜಯಿನಿ ಪೀಠ ಬಹಳ ಮಹತ್ವಪುಳ್ಳ ದ್ದೆಂದು ಎನಿಸುತ್ತದೆ

ಕುರುಗೋಡು (ಎರಡನೆಯ) ರಾಜಮಲ್ಲ

(ಕ್ರಿ. ಶ. ೧೧೮೧–೧೧೮೪)

ಕುರುಗೋಡು ಬಳ್ಳಾರಿ ತಾಲೂಕಿನಲ್ಲಿದೆ ಇದೊಂದು ಐತಿಹಾಸಿಕ ಸ್ಥಳ. ಇದು ಬಲ್ಲಕುಂದೆ ನಾಡಿನ ರಾಜಧಾನಿಯಾಗಿತ್ತು. ನಾಗವಂಶದ ಸಿಂಧ ಅರಸರು ಇಲ್ಲಿ ಆಳಿದರು. ಇವರಲ್ಲಿ ಇಬ್ಬರು ರಾಜಮಲ್ಲರು ಬಹು ಪ್ರಸಿದ್ಧರು. ಮೊದಲನೆಯ ರಾಜಮಲ್ಲ ಕ್ರಿ. ಶ. ೧೧೦೩ ರಿಂದ ೧೧೦೭ರ ವರೆಗೆ ಆಳಿದನು. 'ಶಿವಪಾದಶಿಖಾಮಣಿ', 'ಪಾರ್ವತೀಶಾಂಘ್ರಿ ನಿರ್ಭರಭಕ್ತಂ' ಎಂದು ಮುಂತಾಗಿ ಈತನನ್ನು ಶಾಸನಗಳಲ್ಲಿ ವರ್ಣಿಸಿದೆ. ಈತನ ಮೊಮ್ಮಗನೇ ಎರಡನೆಯ ರಾಜಮಲ್ಲ.

ಈ ರಾಜಮಲ್ಲ ಮಹಾ ಶಿವಭಕ್ತ. ಈತನನ್ನು ಗುಬ್ಬಿ ಮಲ್ಲಣಾರ್ಯ ತನ್ನ ವೀರಶೈವಾಮೃತ ಮಹಾಪುರಾಣದಲ್ಲಿ-

"ಬೇಗೆಯೊಳು ಲಿಂಗಮಂ ನುಂಗಿಯುಗುಳುತ್ತಲನು
ರಾಗಿಸಿದ ಕುರುಗೋಡು ರಾಜಮಲ್ಲಯ್ಯಂ........"

ಎಂದು ಹೊಗಳಿದ್ದಾನೆ. ತನ್ನ ಇಷ್ಟಲಿಂಗವನ್ನು ನುಂಗಿ ಮತ್ತೆ ಹೊರಗೆ ತೆಗೆಯುತ್ತಿದ್ದನಂತೆ ಈ ಲಿಂಗ ಭಕ್ತನು.

ಕಲ್ಯಾಣ ಚಾಳುಕ್ಯ ನಾಲ್ಕನೆಯ ಸೋಮೇಶ್ವರ (೧೧೮೪-೧೧೯೯)ನ ಕಾಲದ ಒಂದು ಶಾಸನದಲ್ಲಿ ಈತನನ್ನು ಈ ರೀತಿಯಾಗಿ ಕೀರ್ತಿಸಲಾಗಿದೆ: *

ಪೊಡವಿಯ ಸಮಸ್ತ ಭಕ್ತರಲ್ಲಿ ಶಿವನು ಈತನನ್ನು ಮೆಚ್ಚಿ ನಿತ್ಯ ವರವನ್ನು ಕೊಡುತ್ತಿದ್ದನು. ಹೀಗೆ ಇಮ್ಮಡಿ ರಾಜಮಲ್ಲದೇವ ನಿತ್ಯ ಪ್ರಸಾದವನ್ನೂ, ರಾಜ್ಯಶ್ರೀಯನ್ನೂ ಶಿವನಿಂದ ಪಡೆದನು

"ಈ ರೀತಿ ರಾಚಮಲ್ಲ ರಾಜ್ಯವಾಳುತ್ತಿರಲು ಶಿವನು ಒಂದು ದಿನ ಪ್ರತ್ಯಕ್ಷನಾದನು. ರಾಚಮಲ್ಲ ಆತನನ್ನು ಕಂಡು ಆನಂದದಿಂದ ಪೊಡಮಟ್ಟನು. ಶಿವಲಿಂಗಾರ್ಚನೆ ಮಾಡಿ ಶರೀರ ಸಹಿತ, ಕುದುರೆ ಚಾಮರ, ಜೆಳ್ಗೊಡೆ ಮುಂತಾದುವು ಗಳೊಡನೆ ಶಂಕರನಲ್ಲಿ ಐಕ್ಯನಾದನು."

"ಜಾಣನು ಲೌಕಿಕ ಮತ್ತು ಪಾರಮಾರ್ಥ ಎರಡನ್ನೂ ನಡೆಸುವನು." ಇಮ್ಮಡಿ ರಾಚಮಲ್ಲ ಭಕ್ತಿಯ ರಾಜ್ಯವನ್ನು ಮತ್ತು ಇಹದ ರಾಜ್ಯವನ್ನು ಏಕಕಾಲಕ್ಕೆ ಸಮರ್ಥವಾಗಿ ನಡೆಸಿದ ಜಾಣ, ಮಹಿಮಾನ್ವಿತ.

---

* ಡಾ| ಎಂ. ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು ಪುಟ ೧೦೧-೧೦೨

ರಾಯರಾಜಗುರು ಶ್ರೀಮತ್ ಕಾಶೀವಿಲಾಸ ಕ್ರಿಯಾಶಕ್ತಿ ದೇವರು

(ಕ್ರಿ. ಶ. ೧೩೩೬)

ಶ್ರೀಮತ್ ಕಾಶೀವಿಲಾಸ ಕ್ರಿಯಾಶಕ್ತಿ ದೇವರು ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ಸಂಗಮ ವಂಶದ ದೊರೆಗಳ ಕುಲಗುರು, ರಾಜಗುರು, ಸಾಮ್ರಾಜ್ಯ ಸ್ಥಾಪನೆಗೆ ಮೂಲ ಪ್ರೇರಕ; ಹರಿಹರ ಬುಕ್ಕ ಮತ್ತು ಅವರ ತಮ್ಮಂದಿರಿಗೆ ತನ್ನ ತಪಶ್ಶಕ್ತಿಯಿಂದ, ರಾಜಕಾರಣ ನೈಪುಣ್ಯದಿಂದ ಸಕಲ ವಿಧದ ನೆರವಿತ್ತವನು. ತನ್ನ 'ಮಧುರಾವಿಜಯ' ಸಂಸ್ಕೃತ ಕಾವ್ಯದಲ್ಲಿ ಗಂಗಾದೇವಿ ಆತನನ್ನು ಭಕ್ತಿಯಿಂದ ಸ್ತುತಿಸುತ್ತಾಳೆ :

"ಅಸಾಧಾರಣ ಸಾರ್ವಜ್ಞಂ ವಿಲಸತ್ಸರ್ವ ಮಂಗಲಂ

ಕ್ರಿಯಾಶಕ್ತಿಗುರುಂ ವಂದೇ ತ್ರಿಲೋಚನ ಮಿವಾಪರಂ"

ಈತನನ್ನು ಕುರಿತು ಅನೇಕ ಶಾಸನಗಳಿವೆ. ಸೊರಬದ (Epigraphia Karnatica Vol. VIII No. 375) ಶಾಸನ, ಶಿಕಾರಿಪುರ ತಾಲೂಕ ಹಾರೋಮುಚ್ಚಳ್ಳಿ ಅಗ್ರಹಾರದ (ಕನ್ನಡ ಶಾಸನ ಗ್ರಂಥ ನಂ ೨, ಶಾಸನ ಸಂಖ್ಯೆ ೨೮೧)

ಶಾಸನ, ಹರಿಹರದ (Epigraphia Karnatica Vol. XI No. 23) ಶಾಸನ ಮತ್ತು ಚೆನ್ನರಾಯ ಪಟ್ಟಣ ತಾಲೂಕ ಹುಲಿಕೇರಿ (Epigraphia Karnatica No. 256) ಶಾಸನ ಗಳಲ್ಲಿ ಈತನನ್ನು ಮಾರ್ಗದರ್ಶಕನೆಂದೂ ಗುರುವೆಂದೂ ವರ್ಣಿಸ ಲಾಗಿದೆ. * ಹಾರೋಹಳ್ಳಿ ಅಗ್ರಹಾರದ ಶಾಸನದಲ್ಲಿ ಈತ ಮಾಧವ ಮಂತ್ರಿಗೆ ನಿಜೇಷ್ಟಲಿಂಗ'ವನ್ನು ಕೊಟ್ಟನೆಂದು ಹೇಳಲಾಗಿದೆ.

ಹೀಗೆ ಕ್ರಿಯಾಶಕ್ತಿಯು ವಿಜಯನಗರ ಸಾಮ್ರಾಜ್ಯದ ಸ್ಥಾಪಕರಿಗೆ ಕುಲಗುರುವಾಗಿ, ರಾಜಗುರುವಾಗಿ, ಸಾಮ್ರಾಜ್ಯ ಸ್ಥಾಪನೆಗೆ ಪ್ರೇರಕನಾಗಿದ್ದನೆಂದು ಶಾಸನಗಳಿಂದ ಸಿದ್ಧವಾಗು ತ್ತದೆ. ವಸ್ತುಸ್ಥಿತಿ ಹೀಗಿದ್ದರೂ ವಿದ್ಯಾರಣ್ಯನೇ ಕುಲಗುರು, ಆತನೇ ಸಾಮ್ರಾಜ್ಯಸ್ಥಾಪನೆಗೆ ಪ್ರೇರಕ ಎಂದು ಹೇಳುವುದು, ಬರೆಯುವುದು ಇತಿಹಾಸಕ್ಕೆ ಸತ್ಯಕ್ಕೆ ಅಪಚಾರ ಮಾಡಿದಂತ ಲ್ಲವೇ ? ವಿದ್ಯಾರಣ್ಯರು ಪ್ರೇರಕರಲ್ಲ, ಅವರು ರಾಜಗುರುಗಳಲ್ಲ ಎಂಬುದು ಸಿದ್ಧವಾಗಿ ಬಹಳ ದಿನಗಳಾದುವು. ಡಾ| ಪಿ. ಬಿ ದೇಸಾಯಿ ಮತ್ತು ಡಾ| ಸಾಲೆತೊರೆ ಮುಂತಾದ ಇತಿಹಾಸ ತಜ್ಞರು ಈ ವಿಷಯವನ್ನು ಆಧಾರಗಳಿಂದ ಸಿದ್ಧಗೊಳಿಸಿದ್ದಾರೆ. ಶಾಸನ, ಕಾವ್ಯ, ಇತಿಹಾಸ, ದಾಖಲೆ ಯಾವುದರಲ್ಲಿಯೂ

* ವೀರಶೈವ Volume IV, No. 4, ಪುಟ ೨೭–೩೧
ಡಾ| ನಂದಿಮಠರ ಲೇಖನ

ವಿದ್ಯಾರಣ್ಯರು ರಾಜಗುರುವಾಗಿದ್ದು, ಸಾಮ್ರಾಜ್ಯ ಸ್ಥಾಪನೆಗೆ ನೆರವಾದ ಉಲ್ಲೇಖವಿಲ್ಲ. ಸಾಮ್ರಾಜ್ಯ ಸ್ಥಾಪನೆಯ ಕಾಲಕ್ಕೆ ಆತ ಅಲ್ಲಿರಲೇ ಇಲ್ಲ. ಡಾ| ಪಿ. ಬಿ. ದೇಸಾಯಿಯವರು ಹೀಗೆ ಹೇಳುತ್ತಾರೆ: "ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಸಾಂಪ್ರದಾಯಿಕ ಕಾಲವಾದ ಕ್ರಿ. ಶ. ೧೩೩೬ರ ಬಳಿಕ ಎರಡು ದಶಕಗಳು ಕಳೆದ ಮೇಲೆ ವಿದ್ಯಾರಣ್ಯರ ಸಂಬಂಧ ವಿಜಯನಗರದೊಡನೆ ಬೆಳೆಯಿತು ಎಂದು ಉಪಲಬ್ಧವಿದ್ದ ಪುರಾವೆಗಳು ತಿಳಿಸುತ್ತವೆ." ೧ "ಪಾಶುಪತ ಪಂಥದ ಕಾಶೀವಿಲಾಸ ಕ್ರಿಯಾಶಕ್ತಿ ರಾಜಗುರುವಾಗಿದ್ದನು ಮತ್ತು ಒಂದನೆಯ ಬುಕ್ಕನಿಗೆ ಸಲಹೆಗಾರನಾಗಿದ್ದನು." ೨ ಡಾ| ಸಾಲೆತೊರೆಯವರ ಅಭಿಪ್ರಾಯ ಹೀಗಿದೆ: "ರಾಜಧಾನಿಯ ನಿರ್ಮಾಣದ ಬಗ್ಗೆ ವಿದ್ಯಾರಣ್ಯ ಸಹಾಯ ನೀಡಿದನೆಂಬ ದಂತಕಥೆ ಮತ್ತು ನಾಯಿ ಮತ್ತು ಮೊಲದ ಪ್ರಸಂಗ ಮುಂತಾದವುಗಳನ್ನು ತರುವಾಯ ಕಾಲದ ಕಲ್ಪಿತಗಳೆಂದು ನಾವು ಅವುಗಳನ್ನು ತಳ್ಳಿ ಹಾಕಿಬಿಡಬಹುದು. ಆತನ ವ್ಯಾಪಕವಾದ ಪಾಂಡಿತ್ಯ ಮತ್ತು ಪ್ರಖ್ಯಾತಿಗಳಿಂದ ಪ್ರಭಾವಿತರಾಗಿ ಜನ ಈ ವಿಷಯವನ್ನು ಆತನ ತಲೆಗೆ ಕಟ್ಟಿರಬಹುದೆಂದು ಭಾವಿಸಬಹುದು." ೩

---

೧. A History of Karnataka Page 326

೨ ಅದೇ ಪುಟ ೩೪೪

೩. Social and Political Life in the Vijaya-nagara Empire Page 110

ವಿಜಯ-ನಗರಕ್ಕೆ ವಿದ್ಯಾನಗರವೆಂದು ಹೆಸರಿಟ್ಟು ಕರೆದುದು ಎಂದು ಹೇಳುವ ಮಾತು ಸುಳ್ಳು. ಅದಕ್ಕೆ ವಿದ್ಯಾನಗರವೆಂಬ ಹೆಸರನ್ನು ಬಳಸಿದ್ದು ೧೫೩೧ ರಿಂದ ಈಚೆಗೆ. ೧ ಈ ನಗರಕ್ಕೆ ವಿಜಯದ ಸಂಕೇತವಾಗಿ 'ವಿಜಯ' ಮತ್ತು 'ವಿಜಯನಗರ' ಎಂದೇ ಕರೆಯಲಾಗಿದೆ. ವಿಜಯನಗರ ಹರಿಹರನ ಕಾಲಕ್ಕೆ (ಹುಕ್ಕ) ಅಸ್ತಿತ್ವದಲ್ಲಿಯೇ ಇರಲಿಲ್ಲ. ಇದನ್ನು ಬುಕ್ಕ ದೊರೆ ೧೩೬೮ ರಲ್ಲಿ ನಿರ್ಮಿಸಲು ಪ್ರಾರಂಭಿಸಿದನು. ಮತ್ತು ಅದು ಎರಡನೆಯ ಹರಿಹರನ ಕಾಲಕ್ಕೆ ೧೩೮೮ ರಲ್ಲಿ ಮುಗಿಯಿತು. ಎರಡನೆಯ ಹರಿಹರನ ಕಾಲದಲ್ಲಿ, ವಿಜಯನಗರ ರಚನೆಯ ಮುಕ್ತಾಯ ಘಟ್ಟದಲ್ಲಿ ವಿದ್ಯಾರಣ್ಯ ವಿಜಯನಗರಕ್ಕೆ ಬಂದಂತೆ ತೋರುತ್ತದೆ. ಇದೇ ಆತ ವಿಜಯ-ನಗರಕ್ಕೆ ಮೊದಲ ಸಲ ಬಂದುದು. ಆದುದರಿಂದ ಸಾಮ್ರಾಜ್ಯ ಸ್ಥಾಪನೆಯ ಕಾಲಕ್ಕೆ ಆತ ಅಲ್ಲಿ ಇರಲಿಲ್ಲ ಮತ್ತು ಆತನಿಂದ ನೆರವು ದೊರಕಲಿಲ್ಲ. "....ಸ್ಥಾಪಕರೊಡನೆ ಮಹಾ ಸಂನ್ಯಾಸಿಯಾದ ವಿದ್ಯಾರಣ್ಯರ ಅನ್ಯೋನ್ಯ ಸಂಬಂಧವಿತ್ತೆಂದು ಈ ಎಲ್ಲ ಕಥೆಗಳು ಹೇಳುತ್ತವೆ. ಆದರೆ ಶಾಸನಗಳು ಮತ್ತು ಸಮಕಾಲೀನ ಪುರಾವೆಗಳು ಈ ನಂಬಿಕೆಗಳನ್ನು ಅಲ್ಲಗಳೆಯುತ್ತವೆ. ಸತ್ಯವಾದ ಮಾತೆಂದರೆ : ಸಾಮ್ರಾಜ್ಯ ಸ್ಥಾಪಕರ ಕುಲಗುರು ಮೊದಲಿಗೆ ಕ್ರಿಯಾಶಕ್ತಿ ಯಾಗಿದ್ದನು; ವಿದ್ಯಾರಣ್ಯನಾಗಿರಲಿಲ್ಲ. ೩

---

೧ Social and Political Life in the Vijayanagra Empire Page 112

೨. ಅದೇ ಪುಟ ೧೧೨

೩. ಅದೇ ಪುಟ ೨೬

ಅಸಾಧಾರಣ ಪಂಡಿತ, ಅಸೀಮ ಪ್ರತಿಭಾನ್ವಿತ, ರಾಜ ಕಾರ್ಯ ಬಲ್ಲಿದ, ಶಾಪಾನುಗ್ರಹ ಶಕ್ತಿಯುಳ್ಳಾತ ಆದ ಕ್ರಿಯಾ ಶಕ್ತಿದೇವರು ವಿಜಯನಗರ ಸಾಮ್ರಾಜ್ಯ ಸ್ಥಾಪಕರಿಗೆ ರಾಜ ಗುರುವಾಗಿದ್ದು ಅರಸರಿಗೆ, ಮಂತ್ರಿಗಳಿಗೆ, ದಂಡನಾಯಕರಿಗ ಮಾರ್ಗದರ್ಶಕನಾಗಿದ್ದನೆಂಬುದು ಶಾಸನ ಮತ್ತು ಕಾವ್ಯ ಗಳಿಂದ ಸಿದ್ಧವಾಗುತ್ತದೆ.

ಲಕ್ಕಣ್ಣ ದಂಡೇಶ ಹೇಳುವ ನೂತನ ಶರಣರು

(ಕ್ರಿ. ಶ ೧೩೦೦-೧೪೫೦)

ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿ ತತ್ತ್ವ, ಶಾಸ್ತ್ರ, ಧರ್ಮ, ಇತಿಹಾಸ ಮುಂತಾದುವುಗಳ ದೃಷ್ಟಿಯಿಂದ ಒಂದು ಮಹತ್ವದ ಕೃತಿ. ಈ ಕಾವ್ಯದಲ್ಲಿ ೩೮ ನೆಯ ಸಂಧಿ ಅತ್ಯಂತ ಮಹತ್ವದ್ದು;. ಅನೇಕ ವಿಧದಿಂದ ಕುತೂಹಲವನ್ನು ಕೆರಳಿಸುವಂತಹುದು. ೨೫೬ ವಾರ್ಧಕ ಷಟ್ಪದಿಗಳಲ್ಲಿ ಸುಮಾರು ಆರುನೂರು ನೂತನ ಶರಣರ ಚರಿತ್ರೆಗಳಿವೆ. ಇವರು ಭಾರತದ ಬೇರೆ ಬೇರೆ ಭಾಗಗಳಲ್ಲಿದ್ದವರು. ಸುಮಾರು ಕ್ರಿ. ಶ. ೧೩೦೦

ರಿಂದ ೧೪೫೦ರ ಕಾಲದಲ್ಲಿ ಇದ್ದವರು ಇವರು. ಸಾರಿಗೆ ಸಂಪರ್ಕಗಳು ಅಸಮರ್ಪಕವಾಗಿದ್ದ ಆ ಕಾಲದಲ್ಲಿ ಇಷ್ಟು ಜನರನ್ನು ಸಂಶೋಧಿಸಿ ಹೊರತೆಗೆದುದು ಲಕ್ಕಣ್ಣ ದಂಡೇಶನ ಕರ್ತೃತ್ವಶಕ್ತಿಯನ್ನು ಸಾರುತ್ತದೆ. ಇವರ ಊರು, ಕಾಯಕ ಮುಂತಾದುವುಗಳನ್ನು ಕವಿ ಬಹು ಸಂಕ್ಷಿಪ್ತವಾಗಿ ಹೇಳುತ್ತಾನೆ. ಕೆಲವರ ಚರಿತ್ರೆ ವಿಸ್ತರಿಸಿ ಹೇಳುತ್ತಾನೆ ವಿಷಯ ಸಂಗ್ರಹವಾಗದಿದ್ದ ಕಡೆ ಕೇವಲ ಹೆಸರನ್ನು ಹೇಳುತ್ತಾನೆ. ಊರ ಹೆಸರಂತೂ ಖಂಡಿತ ಹೇಳುತ್ತಾನೆ. ಇವರ ವಿವಿಧ ಕಾಯಕಗಳ ಬಗ್ಗೆ, ಇವರ ಜೀವನದ ಬಗ್ಗೆ, ಅಧ್ಯಯನ ಮಾಡಿದರೆ ಒಂದು ಹೊಸ ಪ್ರಪಂಚ, ಒಂದು ನೂತನ ಇತಿಹಾಸ ಹೊರಬರುತ್ತದೆ.

ಶಿವತತ್ತ್ವ ಚಿಂತಾಮಣಿಯಲ್ಲಿ ಬಳ್ಳಾರಿ ಜಿಲ್ಲೆಗೆ ಸೇರಿದ ೩೯ ಜನ ಶರಣರಿದ್ದಾರೆ. ಅವರ ಹೆಸರು ಊರು ಇಲ್ಲಿ ಕೊಟ್ಟಿದೆ:

ಆತಿ ಚಿನ್ನವರದ— ಆದವನಿ

ಏಕೋಭಾವು (ಎಕ್ಕಪ್ಪ ತಂದೆ)— ಮಾಣೂರು

ಒಂದೆತ್ತಿನಯ್ಯಗಳು— ಹಂಪೆ

ಕನ್ನಪ್ಪಯ್ಯ— ಗೂಳಿಯ

ಕನ್ನಿದೇವಯ್ಯ — ಐಗನಹಳ್ಳಿ

ಕರಿಯ ನಾಗಣ್ಣನವರ ಶಿಶು ಸದಾಶಿವ — ಗೂಳೆಯ

ಕ್ರಿಯಾಶಕ್ತಿಯತಿರಾಯ— ಪಂಪಾಕ್ಷೇತ್ರ

ಕೇತಿದೇವ— ಚಾವಕನೂರು

ಕೊಂಡಮಲ್ಲಯ್ಯ— ಬುಕ್ಕರಾಯಸಮುದ್ರ

ಗುರುಮೂರ್ತಿ ಒಂದೆತ್ತಿನಯ್ಯಗಳು— ಹಂಪೆ (ಹಂಪಾಪತಿಯ ರಥವೀದಿ)

ಗುರುಮೂರ್ತಿ (ಆಕಾಶವಾಗಿಯತಿ ವಂದಿತ)— ಪಂಪಾಕ್ಷೇತ್ರ

ಚರಲಿಂಗಮೂರ್ತಿಗಳು— ಮತಂಗಾಚಲದ ಗುಹಾಂತರ

ಚರಲಿಂಗಮೂರ್ತಿಗಳು— ವಿಜಯನಗರ

ಚಾಕಣ್ಣ— ಮಾರಿಹಳ್ಳಿ

ಜ (ಚ) ಕ್ಕ— ಮೈಲಾವರ

ಜಾಯಿದೇವ (ಜೊಲ್ಲಿಹಳ್ಳಿಯ ಜಾಯಿದೇವ)— ಕಾಟಿಗನಹಳ್ಳಿ

ತಿಪ್ಪಣ್ಣ— ಭಂಡಿ

ದಕ್ಷಿಣಾಮೂರ್ತಿಯತಿ ಚಕ್ರವರ್ತಿ— ಪಂಪಾಕ್ಷೇತ್ರ

ದಾಸ (ಮೊದಲ ಹೆಸರು ಕಾಟು)— ಸುಗ್ಗನಹಳ್ಳಿ

ದೇಪಣ್ಣ (ಶವನೂಲಕಾಯಕ)— ಬಾಗವಾಡಿ

ದೇವರಾಜೇಂದ್ರ— ವಿಜಯಕಲ್ಯಾಣಪುರ

ಧೂಪದೊಡೆಯರು— ಕೊಟ್ಟೂರು

ನಾಗಯ್ಯ (ಕುಂಬಾರ)— ನಿಟ್ಟೂರು

ಪರಮೇಶ್ವರಯ್ಯಗಳು— ವಿರುಪಾಪುರ

ಪ್ರಾಣಲಿಂಗಿಗಳು— ಕಾಮಲಾಪುರ

ಬಸವಣ್ಣ— ಅಮ್ಮಳ

ಬಾಗಿಲ ಭೈರವ— ರಾಯದುರ್ಗ

ಬೊಮ್ಮಣ್ಣಯ್ಯ— ಬೆಣ್ಣೆಕಲ್ಲು

ಭಕ್ತಗಣತತಿ— ವಿಜಯನಗರ

ಭಕ್ತಮಾಹೇಶ್ವರರು— ಬುಕ್ಕಸಾಗರಪುರ

ವರದಪ್ಪ (ಪುರಾಂತಕನು)— ಮೈಲಾವರ

ವಿಟ್ಟಪ್ಪ— ಬಾಗವಾಡಿ (ವಳ್ಳಿ)

ವಿರೂಪಣ್ಣ (ಕಡಗದ ಕಾಯಕ)— ಹೊನ್ನೂರು

ವೀರಮಾಹೇಶ್ವರರು— ಬಸಪುರ

ಶಿವಭಾವ (ತಾಂತ್ರಿಕರು)— ಪಂಪಾಕ್ಷೇತ್ರ

ಶಿವಯುತರು— ಪಂಪಾಪುರ

ಶಿವಾನುಭಾವಿಗಳು— ದೇವರಾಜೇಂದ್ರಪುರ

ಶೀಲವಂತಜ್ಜಪ್ಪ— ಹಾಲವಾಗಿಲು

ಹಿ (ಹ) ರಿಯಪ್ಪ— ಉಜ್ಜೈನಿ

ನೂರೊಂದು ವಿರಕ್ತರು

(ಕ್ರಿ. ಶ. ೧೪೩೦)

ಲಿಂಗವಂತ ಧರ್ಮ, ಕನ್ನಡ ನಾಡು ಮತ್ತು ನುಡಿಗೆ ನೂರೊಂದು ವಿರಕ್ತರಿಂದ ಬಹು ವಿಶಿಷ್ಟವಾದ ಸೇವೆ ಸಂದಿದೆ. ಪ್ರೌಢದೇವರಾಯನ ಅರಸೊತ್ತಿಗೆಗೆ ಅವರು ತಮ್ಮ ಗೆಯ್ಮೆಯಿಂದ ಕಳೆ ತಂದುದಲ್ಲದೆ ಆ ಅರಸೊತ್ತಿಗೆ ನಿರಾತಂಕವಾಗಿ, ಸುಭದ್ರವಾಗಿ ಸಾಗಲು ಮಹಾಶಕ್ತಿಯನ್ನೂ ಒದಗಿಸಿದರು

ಇವರನ್ನು ಕುರಿತು ಲಕ್ಕಣ್ಣ ದಂಡೇಶ ತನ್ನ ಶಿವತತ್ತ್ವ ಚಿಂತಾಮಣಿಯಲ್ಲಿ ಏನೂ ಹೇಳಿಲ್ಲ. ಇದಕ್ಕೆ ಕಾರಣ ತಿಳಿಯದು. ಈ ವಿಶಿಷ್ಟರು ಎಷ್ಟು ಜನರೆಂಬುದು ಆಗಿನ್ನೂ ನಿಷ್ಕರ್ಷೆಯಾಗಿರಲಿಕ್ಕಿಲ್ಲ; * ಆ ಕಾರಣದಿಂದ ಆತ ಇವರ ಚರಿತ್ರೆಯನ್ನು ತನ್ನ ಕಾವ್ಯದಲ್ಲಿ ಸೇರಿಸಿರಲಿಕ್ಕಿಲ್ಲ ಎಂದು ಪಂಡಿತರು ಹೇಳುವ ಮಾತಿಗಿಂತ ಈಗ ಹೆಚ್ಚಿಗೆ ಏನೂ ಹೇಳಲು ಬರುವಂತಿಲ್ಲ.

ಮುಂದೆ ಬಂದ ಗುಬ್ಬಿ ಮಲ್ಲಣ್ಣನಿಗೂ ಇವರ ಸಂಖ್ಯೆ ಎಷ್ಟೆಂಬುದು ತಿಳಿದಿಲ್ಲ. ಆದರೆ ಆ ಬಳಿಕ ಬಂದ ಅದೃಶ್ಯ ಕವಿ ಇವರ ಸಂಖ್ಯೆ ನೂರೊಂದು ಎಂದು ಹೇಳುತ್ತಾನೆ. ಈತನಿಗೆ ಇವರ ಸಂಖ್ಯೆ ಖಚಿತವಾಗಿ ತಿಳಿದಿದೆ. ಆದರೆ ಕೆಲವೇ ಜನರ ಹೆಸರು ಹೇಳುತ್ತಾನೆ. ಆ ಬಳಿಕ ಬಂದ ಕವಿಗಳೆಲ್ಲ ನೂರೊಂದು ಸಂಖ್ಯೆಯನ್ನು ಹೇಳುತ್ತಾರೆಯೇ ಹೊರತು ಅವರೆಲ್ಲರ ಹೆಸರು ಹೇಳುವುದಿಲ್ಲ ಕ್ರಿ ಶ. ೧೬೫೦ ರಲ್ಲಿದ್ದ ರ ದ್ರಕವಿ ನೂರೊಂದು ವಿರಕ್ತರಲ್ಲಿ ಮೊದಲಿಗನೂ, ಅಗ್ರಗಣ್ಯನೂ ಆದ "ಕರಸ್ಥಲದ ನಾಗಲಿಂಗ ಚರಿತೆ" ಸಾಂಗತ್ಯದಲ್ಲಿ ಬರೆದಿದ್ದಾನೆ. ಇವನೂ ನೂರೊಂದು ವಿರಕ್ತರ ಹೆಸರು ಹೇಳಿಲ್ಲ. ಸಮಗ್ರ ನೂರೊಂದು ವಿರಕ್ತರ ಹೆಸರು ಮತ್ತು ಕಾಯಕ

---

* ಡಾ। ಆರ್. ಸಿ. ಹಿರೇಮಠ : ಷಟ್‌ಸ್ಥಲ ಜ್ಞಾನಸಾರಾಮೃತ, ಚಾರಿತ್ರಿಕ ವಿವೇಚನೆ, ಪುಟ ೧೫.

ಗಳೊಡನೆ ಅವರ ಚರಿತ್ರೆ ಹೇಳಿದವನು ಕ್ರಿ. ಶ. ೧೭೩೭ರಲ್ಲಿದ್ದ ವೋದಿರುದ್ರ.

ವೋದಿರುದ್ರ ಹೇಳುವ ನೂರೊಂದು ವಿರಕ್ತರು :

೧ ಕರಸ್ಥಲದ ನಾಗಿದೇವ

೨ ಗುರುಬಸವ

೩ ಹೊನ್ನಿದೇವ

೪ ಹೇಟಿಯ ಮರುಳ

೫ ಟಗರ ಕಾಳೆಗವ ಪ್ರಭು

೬ ಬಾಲಲಿಂಗಣ್ಣ

೭ ಬತ್ತಲೇಶ

೮ ಮಿಡಿಬಿಲ್ಲ ಶಾಂತೇಶ

೯ ಆಯುಧ ಶಾಂತ

೧೦ ಕುದುರೆಯ ಶಾಂತ

೧೧ ಮಂಚದ ಶಾಂತ

೧೨ ಮದ್ದಳೆಯ ಶಾಂತ

೧೩ ಬುಡುಬುಡಿಕೆಯ ಶಾಂತೇಶ

೧೪ ಡಂಗುರ ಶಾಂತ

೧೫ ಖಂಡಣಿ ಶಾಂತ

೧೬ ಸಾಣಖಂಡೆಯ ಶಾಂತ

೧೭ ಮದ್ದಾನಿ ಶಾಂತ

೧೮ ಸಿಂಗಡಿಯ ಶಾಂತ

೧೯ ಚಕ್ರದ ಶಾಂತ

೨೦ ಜೊಂಬೆಕಟ್ಟೆ ಮೆರೆಸುವ ಶಾಂತ

೨೧ ಜಟ್ಟಿಶಾಂತ

೨೨ ವೀರಶಾಂತ

೨೩ ಡೊಂಬಲ ಶಾಂತ

೨೪ ವರ್ಧೇಂದ್ರಿಯ ಶಾಂತ

೨೫ ಗುರುಬಸವೇಶ್ವರ

೨೬ ನಿಬ್ಬೆರಗಿನ ಮಹಾಶಾಂತ

೨೭ ಸರಕಿಲ ಶಾಂತೇಶ್ವರ

೨೮ ರುದ್ರಭೂಮಿಯ ಶಾಂತ

೨೯ ಬಣ್ಣಗದ್ದುಗೆಯ ಶಾಂತ

೩೦ ರುದ್ರಮೂರ್ತಿ ಶಾಂತ

೩೧ ಭದ್ರಕಾಳಿಯ ಶಾಂತ

೩೨ ಇದ್ದಲಿ ಶಾಂತೇಶ

೩೩ ಬಯಲ ಶಾಂತ

೩೪ ಮಡಿವಾಳ ಶಾಂತ

೩೫ ಹಿಡಿಗಡಲಿಯ ಶಾಂತ

೩೬ ನಿರಾದಿ ಶಾಂತ

೩೭ ಪೆಟಲಿನ ಶಾಂತ

೩೮ ಕಾಳಿ ಶಾಂತೇಶ

೩೯ ಗುಂಡ ಶಾಂತ

೪೦ ಲಂಡರಾಹುತನೆಂಬ ಶಾಂತ

೪೧ ನಂಬಿ ಶಾಂತ

೪೨ ಶಿಶುಗಳೊಡನೆ ಆಟವಾಡುವ ಶಾಂತಮೂರ್ತಿ

೪೩ ಬಿಸಿನೀರಿನ ಶಾಂತ

೪೪ ಚದುರ ಶಾಂತ

೪೫ ಜೇಟಿಯ ಶಾಂತ

೪೬ ಶಿವಮೂರ್ತಿಯ ರೂಪದ ಶಾಂತ

೪೭ ಸುವಿವೇಕಿ ಶಾಂತ

೪೮ ಮಜ್ಜನ ಶಾಂತೇಶ

೪೯ ವಿಭೂತಿಯ ಶಾಂತ

೫೦ ವಸುಗೆಗೆಲಸದ ಶಾಂತ

೫೧ ಜೂಜಿನ ಶಾಂತ

೫೨ ಕಿನ್ನರಿ ಶಾಂತ

೫೩ ಎಗ್ಗದ ಶಾಂತ

೫೪ ಎಚ್ಚರ ನಿಯಮದ ಶಾಂತ

೫೫ ಗಿರಗಟಿಯ ಶಾಂತ

೫೬ ಕಸ್ತೂರಿ ತಿಲಕದ ಶಾಂತ

೫೭ ಇಂದ್ರಜಾಲದ ಶಾಂತ

೫೮ ಗಿಂಡಿಯ ಶಾಂತ

೫೯ ಚೆಂಡಿನಾಟದ ಶಾಂತ

೬೦ ಬೊಂಬೆಯ ಮಾಳ್ಪ ಶಾಂತ

೬೧ ನಿಧಾನದ ಶಾಂತ

೬೨ ಚಂಡವಿಕ್ರಮದ ಶಾಂತ

೬೩ ಚಂದ್ರವಂಕಿ ಶಾಂತ

೬೪ ತೃಣದ ಶಾಂತ

೬೫ ನಾಟ್ಯ ಶಾಂತ

೬೬ ಮಹೇಂದ್ರಜಾಲದ ಗುಣದ ಶಾಂತ

೬೭ ಕವಿಶಾಂತ

೬೮ ಗಾಂಗೇಯ ಶಾಂತ

೬೯ ಭಟ್ಟಶಾಂತ

೭೦ ಪಿಟ್ಟಿ ಶಾಂತೇಶ

೭೧ ಬೆಟ್ಟದ ಮೇಲಿರ್ಪ ಶಾಂತ

೭೨ ಘಟ್ಟಗೋಲಿನ ಶಾಂತಮೂರುತಿ

೭೩ ನಿಷ್ಠೆನಿಜವಂದ ಶಾಂತ

೭೪ ಶರಭಶಾಂತೇಶ

೭೫ ಉಗ್ಗಡಿಪ ಶಾಂತ

೭೬ ಅಟ್ಟಹೊಯ್ವಡ ಮಾಮಿ ಶಾಂತ

೭೭ ಕಟ್ಟುನಾಯಕ ಶಾಂತ

೭೮ ಮರವಿಕ್ರಯಿಪ ಶಾಂತ

೭೯ ಚಾಕಿ ಶಾಂತ

೮೦ ಬೊಗರಿಯ ಶಾಂತಲಿಂಗ

೮೧ ಮರುತರದ ಶರಪಿಶಾಂತ

೮೨ ಸ್ಪಷ್ಟಿರದ ಸಮಾಧಿಯ ಮೇಲಿರುವ ಶಾಂತ

೮೩ ಸೂಜಿಯ ಪರಶಾಂತ

೮೪ ಒಕ್ಕಲಿಗನೆನಿಸುವ ಗುರುಶಾಂತ

೮೫ ಕೆಲಸಿ ಶಾಂತ

೮೬ ಶಂಕರನ ಒಲುಮೆ ಶಾಂತ

೮೭ ನಿಂಬಿ ಶಾಂತ

೮೮ ಸೊಡ್ಡಿನ ಶಾಂತ

೮೯ ಚೆಲುವ ಶಾಂತೇಶ

೯೦ ಸಾಧನೆಯ ಶಾಂತ

೯೧ ಒಡ್ಡಶಾಂತ

೯೨ ನಿರ್ವಂಚನೆಯ ಶಾಂತ

೯೩ ಚಂಗವಿಡಿದೊರೆವ ಶಾಂತ

೯೪ ಶೂಲದ ಶಾಂತಲಿಂಗ

ಎಮ್ಮೆ ಬಸವ

(ಕ್ರಿ. ಶ. ೧೫೫೩)

ಎಮ್ಮೆಯ ಬಸವ ವಿಜಯನಗರದ ಸದಾಶಿವರಾಯನ ಕಾಲದಲ್ಲಿದ್ದ. ಹಂಪೆ ಈತನ ಊರು. ಜಂಬುನಾಥನ ಭಕ್ತ. ಈತ ಕಾಲಜ್ಞಾನಗಳನ್ನು ಬರೆದಿದ್ದಾನೆ. ಹೊಯ್ಯೊ ಡಂಗುರವ, ಹಾಕೆಲೊ ಮುಂಡಿಗೆಯ, ಕಣಿಯ ಕೇಳಿರೊ, ಎಚ್ಚರಿಕೆ ಎಚ್ಚರಿಕೆ, ದಿಮ್ಮಿಸಾಲು, ಕುಕ್ಕುಕ್ಕೊ, ವ್ಯಾ, ರನ್ನದ ಕೋಲೇ ಎಂದು ಆತನ ಕಾಲಜ್ಞಾನದ ಪದ್ಯಗಳು ಮುಗಿಯುತ್ತವೆ.

ನರಸಿಂಗರಾಯನ ಹಿರಿಯ ಕುಮಾರನು
ಹೊಯ್ಯೊ ಡಂಗುರವ
ಅಯ್ಯ ಅರಸುತನಕಿನ್ನು ಕಡೆಗಾಲವಾದೀತು
ಹೊಯ್ಯೊ ಡಂಗುರವ

— ಎಂದು ಸಾರಿದ ಅರಸು ಕೃಷ್ಣದೇವರಾಯ ಇವನನ್ನು ಹಿಡಿತರಿಸಿ ಪಟ್ಟದಾನೆಯ ಮುಂದಕ್ಕೆ ನೂಕಿಸಿದ;

ಆದು ಆವನನ್ನು ಮಸ್ತಕದ ಮೇಲೆ ಕೂಡಿಸಿಕೊಂಡು ಮೆರೆದಾಡಿತು ಆ ಬಳಿಕ ಆತನನ್ನು ಮನೆಯೊಂದರಲ್ಲಿ ನೂಕಿ ಬೀಗ ಹಾಕಲಾಯಿತು. ಆದರೆ ಎಮ್ಮೆ ಬಸವ ಹೊರಬಂದನು. ಮತ್ತೆ ಅದೇ ಡಂಗುರ ಸಾರಿದನು.

ಮೇಲಿನ ಕಾಲಜ್ಞಾನದ ಘಟನೆಯಿಂದ ಎಮ್ಮೆಯ ಬಸವ ಕೃಷ್ಣದೇವರಾಯನ ಕಾಲದಲ್ಲಿಯೂ ಜೀವಿಸಿದ್ದನೆಂದು ತಿಳಿಯುತ್ತದೆ.

ಎಮ್ಮೆ ಬಸವನಿಗೆ ಮಂಡಲೇಶ್ವರ ಸಕಲ ರಾಜುವಿನ ಪುತ್ರ ತಿರುಮಲರಾಜನು 'ಕೊಮರಗೆರೆ' ಎಂಬ ಗ್ರಾಮವನ್ನು ನೀಡಿದನೆಂದು ನಂಜನಗೂಡು ರಾಘವೇಂದ್ರಸ್ವಾಮಿಗಳ ಮಠದ ತಾಮ್ರಶಾಸನದಿಂದ ತಿಳಿಯುತ್ತದೆ. * ಈ ಶಾಸನದ ಕಾಲ ಕ್ರಿ. ಶ. ೧೫೪೩ ಶಾಸನದ ಭಾಷೆ ಸಂಸ್ಕೃತ.

ಈ ಶಾಸನದಲ್ಲಿ ಎಮ್ಮೆ ಬಸವನ ವ್ಯಕ್ತಿತ್ವ ಬಹು ಸುಂದರವಾಗಿ ಅರ್ಥವತ್ತಾಗಿ ಮೂಡಿ ಬಂದಿದೆ. ಇದರಲ್ಲಿ ಆತನನ್ನು 'ವೀರಶೈವಾಗಮಜ್ಞಾಯ' ಎಂದು ಕರೆಯಲಾಗಿದೆ.

---

* ಡಾ। ಎಂ. ಎಂ. ಕಲಬುರಗಿ: ಶಾಸನಗಳಲ್ಲಿ ಶಿವಶರಣರು ಪುಟ ೧೫೨

ಕೊಟ್ಟೂರ ಬಸವೇಶ್ವರ

(ಕ್ರಿ. ಶ. ೧೫೦೯)

ದೀನ ದಲಿತರ ಬಾಳಿಗೆ ಸುಖ-ಸಂತೋಷಗಳನ್ನು ಕರುಣಿಸಿದ ಮಹಾಮಹಿಮ ಕೊಟ್ಟೂರ ಬಸವೇಶ್ವರ. ಜಾತಿ-ಮತ ಪಂಥಗಳೆನ್ನದೆ, ದೊರೆ, ಬಡವಬಲ್ಲಿದರೆನ್ನದೆ ಸರ್ವರೂ ಆತನಿಗೆ ಶರಣುವೊಕ್ಕು ತಮ್ಮ ಅಂತರಂಗದ ಹಸಿವನ್ನು ಹಿಂಗಿಸಿಕೊಂಡರು. ಸರ್ವಜೀವಪ್ರೇಮಿಯಾದ ಈತನನ್ನು ಜನ ಬಸವಣ್ಣನ ಅಪರಾವತಾರವೆಂದು ಕರೆದರು.

ಕೊಟ್ಟೂರು ಬಸವೇಶ್ವರನ ಹುಟ್ಟಿದೂರು ಯಾವುದು ? ತಂದೆ ತಾಯಿ ಯಾರು ? ಎಂಬುದು ಸರಿಯಾಗಿ ತಿಳಿದಿಲ್ಲ. ಮೊದಲು ಆತ ಸರಸೀಪುರದಲ್ಲಿ ಕೆಲವು ದಿನವಿದ್ದನು. ಅಲ್ಲಿಂದ ನಡೆದು ಅನೇಕ ಶಿವಕ್ಷೇತ್ರಗಳನ್ನು ನೋಡಿ ಕೊಟ್ಟೂರಿಗೆ ಬಂದನು. ಅಲ್ಲಿ ಮುಕ್ಕಲ್ಲುಗಳಿಂದ ಕಟ್ಟಿದ ದೇವಾಲಯದಲ್ಲಿ ಇರತೊಡಗಿದನು.

ಮಾಯಾ ಪಾಶವನ್ನು ಹರಿದ ಈ ಪುಣ್ಯ ಪುರುಷ ಬಾಲನಾಗಿ, ಹುಚ್ಚನಾಗಿ ಲೀಲೆ ನಟಿಸಿದನು. ಈತ ದಿಗಂಬರನಾಗಿ ತಿರುಗುವಾಗ ಹೆಂಗಳೆಯರು ತಮ್ಮ ಸೀರೆಯನ್ನು ಹರಿದು

ಕೌಪವಮಾಡಿಕೊಟ್ಟರು. ಅನೇಕ ಜನ ಹುಚ್ಚನೆಂದು ಕಲ್ಲೊಗೆದರು. ಆತ ಜನ ಹಿತಕ್ಕಾಗಿ ಅನೇಕ ಪವಾಡಗಳನ್ನು ಮಾಡಿದನು. ಬಂಜೆ ನಿಂಬೆಕ್ಕನಿಗೆ ಮಗನಾದನು. ಸತ್ತವರನ್ನು ಎತ್ತಿದ, ರೋಗಿಗಳಿಗೆ ಆರೋಗ್ಯವಿತ್ತ, ದಾರಿದ್ರ್ಯ ನಿರ್ಮೂಲನ ಮಾಡಿದ, ಮನದ ಮಾಲಿನ್ಯ ಕಳೆದ ಆತ್ಮದ ಹಸಿವಿಗೆ ಆಹಾರವಾದ, ಅವನನ್ನು ನೆನೆದವರಿಗೆ "ಕೊರಡು ಕೊನರಿತು, ಬರಡು ಹಯನಾಯ್ತು, ಹೆಬ್ಬುಲಿ ಎರಳೆಯಾಯ್ತು. ಬುಸುಗುಟ್ಟುವ ಹಾವು ಹುಲು ಸರವಿಯಾಯಿತು, ಉರಿವ ಕಿಚ್ಚು ಸೀತಳವಾಯ್ತು" ಎಲ್ಲ ಕಡೆಗೆ ಕೊಟ್ಟೂರು ಬಸವನ ಉತ್ಸವಗಳಾಗತೊಡಗಿದುವು

ಆತ ಮಹಾಕರುಣಿ. ಕೀಳುಕುಲದ ಗೌರಾಯಿ ಎಂಬ ಭಕ್ತೆ ಗುರುವಿಗಾಗಿ ಒಂದು ಹೂವಿನ ಹಾರ ಕಟ್ಟಿ ತಂದಳು; ಅದನ್ನು ಸ್ವೀಕರಿಸುವನೋ ಇಲ್ಲವೋ ಎಂದು ಸಂಶಯದಿಂದಲೇ ಬಂದಳು. ಆತ ಪ್ರೀತಿಯಿಂದ ಹಾರ ಸ್ವೀಕರಿಸಿ ಆಕೆಯನ್ನುದ್ಧರಿಸಿದ. ದೇವರಾಯ ದುರ್ಗದ ಬೇಡರ ಚಿಕ್ಕಯ್ಯ ಕೊಟ್ಟೂರ ಬಸವನಿಂದ ಭಕ್ತನಾದನು. ಬೇಟೆಯಾಡುವುದನ್ನು ಬಿಟ್ಟು ಹೆಂಡತಿಯೊಂದಿಗೆ ದೀಕ್ಷೆ ಪಡೆದನು. ಕಟ್ಟಿಗೆ ಕಡಿದು ಮಾರುವ ಕಾಯಕ ಕೈಕೊಂಡನು. ಆತ ಕೊಟ್ಟೂರಿಗೆ ಬಂದಾಗ ಬಸವ ಕೈಮುಗಿದು, "ಬಾರೆನ್ನ ಸಂಗಡಿಗ ನೋಳಿಗೆಯ್ಯ" ಎಂದು ಆತನನ್ನು ಅಪ್ಪಿಕೊಂಡನು

ಕೊಟ್ಟೂರು ಬಸವೇಶ್ವರನಿಗೆ ಅನೇಕ ಜನ ಶಿಷ್ಯರು; ಅವರು ಭಕ್ತಿ ಜ್ಞಾನ ಕ್ರಿಯೆಗಳಲ್ಲಿ ಹೆಸರಾದವರು. ಸೊಂಡೂರು, ಹರಪುರ, ಕರವೂರು, ಹರಪನಹಳ್ಳಿ ಮುಂತಾದ ಊರಿನ ದೊರೆಗಳು ಈತನಿಂದ ಅನುಗ್ರಹಪಡೆದರು. ಕವಿ ಗೌರವಾಂಕ ಕೊಟ್ಟೂರ ಬಸವೇಶ್ವರನ ಪುರಾಣ ಬರೆದು ಗುರುವಿನಿಂದ ಆಶೀರ್ವಾದ ಹೊಂದಿದ; ಈ ಆಶೀರ್ವಾದ ಬಲದಿಂದ ಮೋಳಿಗೆಯ್ಯನ (ಮೋಳಿಗೆ ಮಾರಯ್ಯ) ಪುರಾಣವನ್ನು ರಚಿಸಿದ.

“ಶಿವನಲ್ಲಿ ನಂಬುಗೆ, ಭಕ್ತರಲ್ಲಿ ಕಿಂಕರಭಾವ, ಮೃದು ವಚನ, ಇಂದ್ರಿಯ ವಿಕಾರದಮನ, ಅರಿಷಡ್ವರ್ಗ ಉಪಶಮನ, ಸರ್ವಜೀವಿಗಳಲ್ಲಿ ಕರುಣೆ, ಶಿವಭಕ್ತಿಗಂಗಾವಗಾಹನ” ಇದು ಕೊಟ್ಟೂರು ಬಸವೇಶನ ಉಪದೇಶದ ಸಾರ.

ಕೊನೆಯವರೆಗೂ ಬಸವೇಶ್ವರ ಕೊಟ್ಟೂರಿನಲ್ಲಿಯೇ ಇದ್ದ; ಅಲ್ಲಿಯೇ ಸಮಾಧಿಯಾದ. ಇಂದಿಗೂ ಕೊಟ್ಟೂರು ಪವಿತ್ರ ಕ್ಷೇತ್ರವಾಗಿದೆ.

ಕುರುಗೋಡು ನೀಲಮ್ಮ

(. ಶ. ೧೭೭೦)

ಕುರುಗೋಡು ನೀಲಮ್ಮನ ಸರಿಯಾದ ಚರಿತ್ರೆ ದೊರಕುವುದಿಲ್ಲ; ಸಿಕ್ಕುವ ಚರಿತ್ರೆಯೆಲ್ಲ ಪವಾಡಗಳಿಂದ ತುಂಬಿದೆ. ಆ ಪವಾಡಗಳಿಂದ ಆಕೆ ಮಹಾಶರಣೆ, ಜನರಿಗೆ ಅನೇಕ ವಿಧವಾಗಿ ಮಾರ್ಗದರ್ಶನ ಮಾಡಿನ ಶಿವ ಭಕ್ತೆ ಎಂದು ತಿಳಿದು ಬರುತ್ತದೆ. ಆಕೆ ಹೈದರ್ ಅಲಿಯ ಕಾಲದಲ್ಲಿ ಜೀವಿಸಿದ್ದಳು.

ಬಳ್ಳಾರಿ ತಾಲೂಕದ ಸಿಂದಿಗೇರಿ ಗೌಡರ ಮಗಳು ನೀಲಮ್ಮ ಚಿಕ್ಕಂದಿನಿಂದಲೇ ಆಕೆಯ ಮನಸ್ಸು ಶಿವನತ್ತ ಒಲಿದಿತ್ತು. ಆಕೆಯ ದೀಕ್ಷೆಯ ಗುರುಗಳು ಕೊಟ್ಟೂರುಸ್ವಾಮಿ ಮಠದ ಪೂರ್ವದ ಸ್ವಾಮಿಗಳು. ಆಕೆಯ ಇಷ್ಟ ದೇವರು ಕುರುಗೋಡು ದೊಡ್ಡಬಸವೇಶ್ವರ. ಸಿಂದಿಗೇರಿ ಕುರುಗೋಡಿನಿಂದ ಪೂರ್ವಕ್ಕೆ ಐದು ಮೈಲುಗಳಲ್ಲಿದೆ.

ನೀಲಮ್ಮ ಎತ್ತಿನ ಮೇಲೆ ಕುಳಿತುಕೊಂಡು ಹಳ್ಳಿಗಳಲ್ಲಿ ಸಂಚಾರ ಮಾಡುತ್ತಿದ್ದಳು. ಆ ಎತ್ತಿನ ಕೊರಳಗೆಜ್ಜೆಯು

ಶಬ್ದದಿಂದ ನೀಲಮ್ಮ ಬಂದಳೆಂದು ಜನ ತಿಳಿಯುತ್ತಿದ್ದರು. ಆದರೆ ನೀಲಮ್ಮ ಅವರ ಕಣ್ಣಿಗೆ ಕಾಣುತ್ತಿರಲಿಲ್ಲ ಜನರು ಎತ್ತನ್ನು ಪೂಜಿಸಿ ಅದರ ಕೊರಳಿಗೆ ತಮ್ಮ ಕಾಣಿಕೆಗಳನ್ನು ಕಟ್ಟುತ್ತಿದ್ದರು.

ಆಗ ಬಳ್ಳಾರಿ ಬಾಲದ ಹನುಮಪ್ಪ ನಾಯಕನ ಅಧೀನದಲ್ಲಿತ್ತು. ಹನುಮಪ್ಪನಾಯಕ ನೀಲಮ್ಮನ ಪರಮ ಭಕ್ತ; ಆತನ ತಂಗಿಯರೂ ನೀಲಮ್ಮನಲ್ಲಿ ಭಕ್ತಿಯುಳ್ಳವರಾಗಿದ್ದರು ಅವರು ನೀಲಮ್ಮನ ಹೆಸರಿನಿಂದ ಬಾವಿಗಳನ್ನು ತೋಡಿಸಿ, ಮಠಗಳನ್ನು ಕಟ್ಟಿಸಿ, ಕೊಟ್ಟೂರು ಸ್ವಾಮಿಗಳಿಗೆ ಅರ್ಪಿಸಿದ್ದಾರೆ.

ಶರಣೆ ನೀಲಮ್ಮ ಸ್ನಾನಮಾಡುವಾಗ ಬಚ್ಚಲದಲ್ಲಿ ಐಕ್ಯಳಾದಳು. ಆಕೆ ಅದೃಶ್ಯಳಾದಳೆಂದು ಜನ ಹೇಳುತ್ತಾರೆ. ಆ ಸ್ಥಾನದಲ್ಲಿ ಇಂದಿಗೂ ಪೂಜೆ ನಡೆಯುತ್ತದೆ. ನೀಲಮ್ಮನ ಅನೇಕ ಮಠಗಳಿವೆ. ಕುರುಗೋಡಿನಲ್ಲಿ ದೊಡ್ಡ ಮಠವಿದೆ. ಪ್ರತಿವರ್ಷ ಫಾಲ್ಗುಣ ಪೌರ್ಣಿಮೆಗೆ ಕುರುಗೋಡಿನಲ್ಲಿ ನೀಲಮ್ಮ ಮತ್ತು ದೊಡ್ಡಬಸವೇಶ್ವರರ ರಥೋತ್ಸವ ಜರುಗುತ್ತವೆ.

ಮರಿಸ್ವಾಮಿ

(ಕ್ರಿ. ಶ. ೧೭೭೦-೧೮೪೨)

ಮರಿಸ್ವಾಮಿಗಳಿಗೆ ಜನ್ಮ ಕೊಟ್ಟ ಪುಣ್ಯಸ್ಥಳ ಕಲಬುರಿಗಿ. ಬೃಹನ್ಮಠದ ಬಸವೇಶದೇವ ತಂದೆ, ಸಂಗಮ್ಮ ತಾಯಿ. "ಶಿವನ ಧರ್ಮದ ತಿರುಳ ಮಗನಾಗಿ ಜನಿಸಿತೋ" ಎನ್ನುವಂತೆ ಇವರಿಗೆ ಮಗನಾಗಿ ಹುಟ್ಟಿದನು. ಐದನೆಯ ವರ್ಷದಲ್ಲಿ ತಂದೆ ತಾಯಿಗಳನ್ನು ಕಳೆದುಕೊಂಡನು. ಬಳಗದ ಒಬ್ಬಾಕೆ ಬಾಲಕ ಮರಿಸ್ವಾಮಿಯನ್ನು ಕೆಲವು ದಿನ ಸಲಹಿ ಮನೆಯಿಂದ ಹೊರಗೆ ಹಾಕಿದಳು. ಒಬ್ಬ ಭಕ್ತ ಆತನನ್ನು ಕರೆದೊಯ್ದು ತನ್ನ ಮನೆಯಲ್ಲಿರಿಸಿಕೊಂಡನು. ಎಂಟನೆಯ ವರ್ಷದಲ್ಲಿ ದೀಕ್ಷೆ ಕೊಡಿಸಿ ಓದುಬರಹ ಕಲಿಸುವ ವ್ಯವಸ್ಥೆ ಮಾಡಿದನು. ಮರಿಸ್ವಾಮಿ ದೊಡ್ಡವನಾದಂತೆ ಶಿವಕಳೆ ಹೆಚ್ಚುತ್ತದೆ; ಭಕ್ತರಿಗೆ ಬಯಸಿದ ಇಷ್ಟಾರ್ಥಗಳು ದೊರಕತೊಡಗುತ್ತವೆ.

ಇದೇ ಸಮಯಕ್ಕೆ ಬೆಂಗಳೂರಿನಿಂದ ಲಿಂಗಣ್ಣನೆಂಬ ಒಬ್ಬ ವ್ಯಾಪಾರಿ ಕಲಬುರಿಗಿಗೆ ಬಂದನು. ಮರಿಸ್ವಾಮಿಯನ್ನು ನೋಡಿ ಈತನಿಂದ ಹಣ ಸಂಪಾದಿಸಬಹುದೆಂದು ಯೋಚಿಸಿ ಯಾರಿಗೂ ತಿಳಿಯದಂತೆ ಆತನನ್ನು ತನ್ನ ಜೊತೆಗೆ ಕರೆ

ದೊಯ್ದನು. ಬೆಂಗಳೂರಿಗೆ ಮುಟ್ಟುವುದರೊಳಗಾಗಿಯೇ ಮರಿಸ್ವಾಮಿಗೆ ಬಂದ ಕಾಣಿಕೆಗಳಿಂದ ಆತ ಶ್ರೀಮಂತನಾದನು. ಬೆಂಗಳೂರಿನಲ್ಲಿ ಒಂದು ದೊಡ್ಡ ಅಂಗಡಿ ಪ್ರಾರಂಭಿಸಿದನು. ಮರಿಸ್ವಾಮಿಯನ್ನು ದನ ಕಾಯಲು ಹಚ್ಚಿದನು.

ಮರಿಸ್ವಾಮಿ ಕೆಲವು ದಿನ ದನ ಕಾಯ್ದನು. ಊರಿಗೆ ಹೋಗದೆ ಅಡವಿಯಲ್ಲೇ ಉಳಿದನು ಅಲ್ಲಿಂದ ಕೆಂಗೇರಿಗೆ ಹೋಗಿ ಅಲ್ಲಿಯ ಹಳ್ಳಕ್ಕೆ ಸೇತುವೆ ಕಟ್ಟಿಸಲು- ಪ್ರಾರಂಭಿಸಿದನು. ಅವನ ಭಕ್ತಿಗೆ ಮೆಚ್ಚಿದವರು ಅಲ್ಲಿ ದುಡಿದರು. ಸಾಯಂಕಾಲ ಕೆಲಸಗಾರರು ಉಸುಗನ್ನು ಕೆದರಿದರೆ ಅದರಲ್ಲಿ ಅವರಿಗೆ ದುಡಿದಷ್ಟು ಕೂಲಿ ದೊರಕುತ್ತಿತ್ತು.

ಅಲ್ಲಿಂದ ದೊಡ್ಡ ಬಳ್ಳಾಪುರಕ್ಕೆ ಹೋಗಿ ಕೆಲದಿನವಿದ್ದನು; ಅಲ್ಲಿಂದ ಶಿವಗಂಗೆಗೆ ಹೋದನು. ಶಿವಗಂಗೆಯ ಉತ್ಸವಕ್ಕೆ ಬಂದ ಬೆಂಗಳೂರಿನ ಭಕ್ತರು ಮರಿಸ್ವಾಮಿಯನ್ನು ಮನವೊಲಿಸಿ ಮತ್ತೆ ಬೆಂಗಳೂರಿಗೆ ಕರೆದೊಯ್ದರು ಆಗ ಈತನ ಕೀರ್ತಿ ಎಲ್ಲೆಡೆಗೆ ಹಬ್ಬಿತು. ದಿವಾನ್ ಪೂರ್ಣಯ್ಯನು ಬಂದು ಆಶೀರ್ವಾದ ಪಡೆದು ಈತನ ಮೆರವಣಿಗೆ ಮಾಡಿಸಿದನು.

ಬೆಂಗಳೂರಿನಿಂದ ಮರಿಸ್ವಾಮಿ ಬೂದಿಹಾಳಿಗೆ ಬಂದನು. ಆವೂರಿನ ಗೌಡನ ಹೆಂಡತಿ ಬಸಮ್ಮ ಗರ್ಭಿಣಿಯಿರುವುದನ್ನು ಕಂಡು, “ಹುಟ್ಟುವ ಹೆಣ್ಣು ನನ್ನ ಹೆಂಡತಿಯಾಗುತ್ತಾಳೆ.” ಎಂದು ಹೇಳಿ, ಅವರ ಮನೆಯಲ್ಲಿ ಲಿಂಗಪೂಜೆ ಮಾಡಿ

ಹರಿಹರಕ್ಕೆ ಹೋದನು. ಅಲ್ಲಿಗೆ ಮುಮ್ಮಡಿಕೃಷ್ಣರಾಜ ಮರಿ ಸ್ವಾಮಿಯನ್ನು ಕರೆತರಲು ಬಂಡೆಯ ಚರಮೂರ್ತಿಯನ್ನು ಕಳಿಸಿದನು. ಮರಿಸ್ವಾಮಿ ಮೈಸೂರಿಗೆ ಹೋಗಿ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ದರ್ಶನವಿತ್ತು ಆಶೀರ್ವದಿಸಿ, ಕೆಂಗೇರಿಗೆ ಹೋಗಿ ಕರಿಬಸವದೇವನೊಡನೆ ಮಠದಲ್ಲಿ ವಾಸಿಸಿದನು. ಕೆಲವು ವರ್ಷಗಳ ಬಳಿಕ ಕೆಂಗೇರಿಯಿಂದ ಬೂದಿಹಾಳಿಗೆ ಬಂದು ಬಸವನಗೌಡನ ಕಿರಿಯ ಮಗಳು ನೀಲಗಂಗಾಂಬಿಕೆಯನ್ನು ಮದುವೆಯಾಗಿ ಬಳ್ಳಾರಿಗೆ ಬಂದು ನೆಲಿಸಿದನು.

ಬಳ್ಳಾರಿಯ ಭಾಗ್ಯವೇ ಭಾಗ್ಯ. ಮರಿಸ್ವಾಮಿ ಕೊನೆಯ ವರೆಗೆ ಅಲ್ಲಿಯೇ ನೆಲಿಸಿದನು. ಕೆಲವೇ ದಿನಗಳಲ್ಲಿ ಬಳ್ಳಾರಿ ಪುಣ್ಯ ಕ್ಷೇತ್ರವೆನಿಸಿತು. ನಿತ್ಯ ನೂರಾರು ಜನ ಮರಿಸ್ವಾಮಿಯ ದರ್ಶನಕ್ಕೆ ಬರತೊಡಗಿದರು; ಬೇಡಿದವರಿಗೆ ಬೇಡಿದಿಷ್ಟಾರ್ಥ ಲಭಿಸತೊಡಗಿದುವು.

ಬಳ್ಳಾರಿಯ ಸಕ್ಕರಿ ಕರಡೆಪ್ಪ ಮರಿಸ್ವಾಮಿಯ ಆದೇಶ ದಂತೆ ಒಂದು ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿದನು.

“ ಹೊನ್ನು ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆ ಯಲ್ಲ; ಈ ಲೋಕದ ಪ್ರತಿ ಕಣವೂ ‘ಶಿವ’ ದಿಂದ ತುಂಬಿದೆ” ಎಂಬುದನ್ನು ನಡೆದು ನುಡಿದು, ಈ ಬದುಕನ್ನು ಹಸನುಗೊಳಿಸಿ, ಇಹವನ್ನೇ ಪರವನ್ನಾಗಿ ಪರಿವರ್ತಿಸಿದ ಮಹಾಮಹಿಮ ಮರಿ ಸ್ವಾಮಿ.

ಮರಿಸ್ವಾಮಿ ಶಾ ಶ ೧೭೬೪ ಶೋಭನ ಸಂವತ್ಸರ ಆಷಾಢ ಶುದ್ಧ ತದಿಗೆಯಂದು ಲಿಂಗದೊಳಗಾದನು.

ಪಿಲ್ಲೆದೊರೆ ಎಂಬಾತ ಮಠ ಕಟ್ಟಿಸಿದನು. ಮರಿಸ್ವಾಮಿ ಲಿಂಗೈಕ್ಯರಾದುದನ್ನು ಕೇಳಿ ಮುಮ್ಮಡಿಕೃಷ್ಣರಾಜ ಒಡೆಯ ಗುರುಮಾತೆ ನೀಲಗಂಗಾಂಬಿಕೆಯನ್ನು ಕರೆಸಿಕೊಂಡು ಕಾಣಿಕೆ ಅರ್ಪಿಸಿ ಕಳಿಸಿದರು. ಮಹಾಶರಣೆ ನೀಲಗಂಗಾಂಬಿಕೆ ಶಾ ಶ ೧೮೦೨ ವಿಕ್ರಮ ಸಂತ್ಸರ ಭಾದ್ರಪದ ಮಾಸದಲ್ಲಿ ಶಿವನಲ್ಲಿ ಬೆರೆದಳು.

ಸಕ್ಕರಿ ಕರಡೆಪ್ಪ

(ಕ್ರಿ. ಶ. ೧೮೮೬)

ಬಳ್ಳಾರಿಯ ಸಕ್ಕರಿ ಸಂಗನಬಸಪ್ಪ ಮತ್ತು ಗಂಗಾಂಬೆ ಸದ್ಭಕ್ತ ದಂಪತಿಗಳು. ಶರಣ ಧರ್ಮವೇ ಮೈವೆತ್ತು ಬಂದಂತಿದ್ದ ಅವರು ಮರಿಸ್ವಾಮಿಯ ಪರಮಶಿಷ್ಯರು; ಪರೋಪಕಾರವನ್ನು ಸಹಜ ಬದುಕಿದವರು. ಅವರಿಗೆ ಮರಿಸ್ವಾಮಿಯ ಅನುಗ್ರಹದಿಂದ ಒಂದು ಗಂಡು ಮಗುವಾಯಿತು; ಅದಕ್ಕೆ ಬಸವಪ್ಪನೆಂದು ಹೆಸರಿಟ್ಟರು. ಆದರೆ ಮುಂದೆ ಆತನಿಗೆ ಕರಡೆಪ್ಪನೆಂಬ ಹೆಸರು ಪ್ರಾಪ್ತವಾಗುತ್ತದೆ.

ಕರಡೆಪ್ಪನಿಗೆ ಯೌವನ ಬಂತು. ಗುರು ಮರಿಸ್ವಾಮಿಯ ಅಪ್ಪಣೆಯ ಮೇರೆಗೆ ನಿಂಬಗಲ್ಲಿನ ಗಂಗಾಂಬಿಕೆಯನ್ನು ಮದುವೆಯಾದ; ಮನೆತನದ ಕಾಯಕವಾದ ವ್ಯಾಪಾರದಲ್ಲಿ ತೊಡಗಿದನು. "ಚಿತ್ತಶುದ್ಧನಾಗಿ ಕಾಯಕ ಮಾಡುವ ಸದ್ಭಕ್ತನಿಗೆ ಎತ್ತ ನೋಡಿದತ್ತ ಲಕ್ಷ್ಮೀ ತಾನೇ ತಾನಾಗಿಪ್ಪಳು." ಕರಡೆಪ್ಪನ ಸಂಪತ್ತು ಬೆಳೆಯಿತು. ಸತ್ಯಶುದ್ಧ ಕಾಯಕದಲ್ಲಿ ದಾಸೋಹ ವಿರಲೇಬೇಕು. ಕರಡೆಪ್ಪ ತ್ರಿದಾಸೋಹಿ; ಗುರುಲಿಂಗ ಜಂಗಮರ ದಾಸೋಹ ನಡೆಯಿತು. ನಿತ್ಯ ನೂರಾರುಜನ ಆತನ ಮನೆಗೆ ಬರತೊಡಗಿದರು; ಮನೆ ಮಠವಾಯಿತು. ಅನ್ನದಾನದ ಜೊತೆಗೆ ಕರಡೆಪ್ಪ ವಿದ್ಯಾದಾನಕ್ಕೂ ಮನಸ್ಸು ಮಾಡಿದನು. ಗುರುಗಳ ಆದೇಶದಂತೆ ಸಂಸ್ಕೃತ ಪಾಠಶಾಲೆ ಸ್ಥಾಪಿಸಿದನು. ಕರಡೆಪ್ಪನವರ ಚೌಕವೆಂದು ಈಗಲೂ ಬಳ್ಳಾರಿಯಲ್ಲಿರುವ ಸ್ಥಳದಲ್ಲಿಯೇ ಸಂಸ್ಕೃತ ಪಾಠಶಾಲೆಯಿತ್ತು. ಊಟ, ವಸತಿ, ಬಟ್ಟೆ, ವಿದ್ಯೆ- ಎಲ್ಲವೂ ಇಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ದೊರಕುತ್ತಿತ್ತು.

ಒಂದು ದಿನ ಮರಿಸ್ವಾಮಿ ಸಕ್ಕರಿ ಕರಡೆಪ್ಪನನ್ನು ಕರೆದು "ನಮ್ಮ ಇಹಲೋಕ ಮಣಿಹ ಮುಗಿಯಿತು. ನಿನಗಿನ್ನು ನಾನಾ ರೀತಿಯ ಕಷ್ಟಗಳು ಬರುವವು; ಧೀರನಾಗಿ ಬಾಳು" ಎಂದು ಹೇಳಿ ಕೆಲದಿನಗಳಲ್ಲಿ ಐಕ್ಯನಾದನು.

ಕರಡೆಪ್ಪನಿಗೆ ಒಂದರ ಮೇಲೊಂದು ಕಷ್ಟಗಳು ಬರತೊಡಗಿದುವು. ಮಡದಿ ಗಂಗಾಂಬಿಕೆ ಲಿಂಗೈಕ್ಯಳಾದಳು. ಕರಡೆಪ್ಪ

ಮತ್ತೊಂದು ಮದುವೆಯಾದನು ಕಾಡಿ ನೋಡುವ ಶಿವನಿಗೇನು? ಇದ್ದೊಬ್ಬ ಮಗ ಕೊನೆಯುಸಿರೆಳೆದನು. ವ್ಯಾಪಾರದಲ್ಲಿ ಅಪಾರ ಹಾನಿಯಾಯಿತು. ಒಮ್ಮಿಂದೊಮ್ಮೆಗೆ ಸರಕಾರಕ್ಕೆ ಲಕ್ಷ ಹಣ ಕಟ್ಟಬೇಕೆಂದು ಆಜ್ಞೆ ಬಂದಿತು; ಕೈಯಲ್ಲಿ ಹಣವಿಲ್ಲ ಶಿವೇಚ್ಛೆಯೆಂದು ಗುರುವನ್ನು ಸ್ಮರಿಸಿದನು ಬೆಳಗಾಗುವುದರೊಳಗಾಗಿ ಹಣ ಕಟ್ಟಬೇಕಾಗಿಲ್ಲವೆಂದು ಸರಕಾರದಿಂದ ಮತ್ತೊಂದು ಆಜ್ಞೆ ಬಂತು ಶಿವನು ಭಕ್ತರೊಡನೆ ಕಾಲುಕೆದರಿ ಜಗಳ ತಗೆಯುತ್ತಾನೆ; ತರಕಟೆ ಕಾಡಿ ನೋಡುತ್ತಾನೆ ಆದರೆ ಕೊನೆಗೆ ತಾನೇ ಸೋಲುತ್ತಾನೆ; ಸೋತು ಸಂತೋಷಪಡುತ್ತಾನೆ; ಭಕ್ತನನ್ನು ತನಗಿಂತ ಅಧಿಕನೆನಿಸುತ್ತಾನೆ.

ರಾಕ್ಷಸ ಸಂವತ್ಸರ ಕಾಲಿಟ್ಟಿತು; ಭೀಕರ ಬರಬಿತ್ತು ದೂರ ದೂರದಿಂದ ಜನ ಸಕ್ಕರಿ ಕರಡೆಪ್ಪನ ಹೆಸರು ಕೇಳಿ ಬರತೊಡಗಿತು. ಬಂದವರಿಗೆಲ್ಲ ದಾಸೋಹಕ್ಕೆ ಅಣಿಮಾಡಿದನು ಕೈಯಲ್ಲಿದ್ದ ಹಣ, ಮನೆಯಲ್ಲಿದ್ದ ಸಂಪತ್ತು ಎಲ್ಲವೂ ವೆಚ್ಚವಾಯಿತು ಆಗ ಜನ ಆತನ ನೆರವಿಗೆ ಬಂದರು. ಬರಗಾಲ ಮುಗಿಯುವ ವರೆಗೆ ಅನ್ನಸಂತರ್ಪಣೆ ನಡೆಯಿತು. ತನ್ನ ಸಂಪತ್ತೆಲ್ಲ ಬರಗಾಲ ಪೀಡಿತ ಬಂಧುಗಳಿಗೆ ವಿನಿಯೋಗವಾಯಿತೆಂದು ಕರಡೆಪ್ಪ ಹಿಗ್ಗಿದನು. ಶಿವನ ಸೊಮ್ಮು ಶಿವನಿಗೆ ಸಲ್ಲಿತೆಂದು ಹೆಮ್ಮೆಪಟ್ಟನು.

ಗುರು ಮರಿಸ್ವಾಮಿ ಆದೇಶವಿತ್ತಿದ್ದಂತೆ ಭಸ್ಮ ಮತ್ತು ಲಿಂಗಗಳ ಒಂದು ಕಣಜವನ್ನು ಮಠದಲ್ಲಿ ಕಟ್ಟಿಸಿದನು. ಶಾ. ಶ.

೧೯೯೭ ಯುವ ಸಂವತ್ಸರ ಕಾರ್ತಿಕ ಶುದ್ಧ ದ್ವಾದಶಿಯಂದು ಲಿಂಗದಲ್ಲಿ ಲಿಂಗವಾದನು.

ಮೈಲಾರ ಬಸವಲಿಂಗಶರಣ

(ಕ್ರಿ ಶ ೧೭೮೦-೧೮೫೦)

ಸಾಹಿತ್ಯವನ್ನು, ವ್ಯಾಪಾರವನ್ನು, ನಿತ್ಯಜೀವನವನ್ನು ಅನುಭಾವದ ಎತ್ತರಕ್ಕೆ ಏರಿಸಿದ ಕಾರಣಿಕ ಮೈಲಾರ ಬಸವಲಿಂಗ ಶರಣ. ಆಡಿದ್ದು, ಮಾಡಿದ್ದು, ನೋಡಿದ್ದು, ನುಡಿದದ್ದು ಎಲ್ಲವೂ ಅನುಭಾವ. ಆದರೆ ಈ ಅನುಭಾವ ಆದರ್ಶಮಯವಾಗಿ ಜೀವನಕ್ಕೆ ಒಗ್ಗದಂತಹುದಾಗಿರಲಿಲ್ಲ; ಸರ್ವರೂ ನಡೆಯಲು ಸಹಜವಾದ.ದಾಗಿತ್ತು.

ಹೂವಿನಹಡಗಲಿ ತಾಲೂಕಿನ ಮೈಲಾರ ಬಸವಲಿಂಗ ಶರಣನ ಹುಟ್ಟಿದೂರ.. ಚಿಕ್ಕಂದಿನಿಂದಲೇ ಆಧ್ಯಾತ್ಮ, ಕಾವ್ಯದ ಒಲವು ಆತನಿಗೆ ಹಾಲವರ್ತಿ ಶ್ರೀ ಚೆನ್ನವೀರಸ್ವಾಮಿ ಬಸವಲಿಂಗ ಶರಣನ ಗುರು; ಲಿಂಗನಾಯ್ಕನ ಹಳ್ಳಿಯಲ್ಲಿ ಆತನ ಆಶ್ರಮ

ಮೈಲಾರಕ್ಕೆ ಐದು ಮೈಲುಗಳಲ್ಲಿರುವ ಲಿಂಗನಾಯ್ಕನ ಹಳ್ಳಿ ತುಂಗಭದ್ರೆಯ ದಂಡೆಯ ಮೇಲಿದೆ. ಅಲ್ಲಿಗೆ ಬಂದು ಹಾಲವರ್ತಿ ಚೆನ್ನವೀರಸ್ವಾಮಿ ಒಂದು ಆಶ್ರಮ ಕಟ್ಟಿದನು. ಹಾಗೆ ಮಾಡಿ ಆತ ನಾಡಿನ, ನುಡಿಯ, ಅನುಭಾವದ ಪುನರುಜ್ಜೀವನಕ್ಕೆ ಕಾರಣಕರ್ತನಾದನು. ನಿಜವಾದ ವೀರಶೈವದ ಆಚರಣೆಗೆ ಆ ಆಶ್ರಮ ಆದರ್ಶವಾಯಿತು; ಜೊಳ್ಳು ಪರಂಪರೆಗಳನ್ನು ನಿರ್ಮೂಲಮಾಡಿ ಲಿಂಗವಂತಿಕೆಯ ಸಹಜತೆಯ ತೇಜವನ್ನು ನಾಡಿನ ತುಂಬ ಹರಡುವ ಬೆಳಕಿನ ಮನೆಯಾಯಿತು. ಮುಳಗುಂದದ ಬಾಲಲೀಲಾಮಹಾಂತಸ್ವಾಮಿ, ಬನ್ನಿಮಟ್ಟಿ ಚೆನ್ನಪ್ಪ, ಶಾಂತವೀರೇಶಚರಮೂರ್ತಿ, ರಾಚೋಟಿಸ್ವಾಮಿ, ಹೊಳಲು ಲಿಂಗಪ್ಪಶರಣ, ಮೈಸೂರು ಪ್ರಾಂತದ ಶಿವಬಸವ ಸ್ವಾಮಿ ಇವರೆಲ್ಲ ಮೈಲಾರ ಬಸಲಿಂಗ ಶರಣನಿಗೆ ಸಹ ಪಾಠಿಗಳು.

ಬಸವಲಿಂಗಶರಣ ಸತ್ಯಶುದ್ಧ ಕಾಯಕಯೋಗಿ; ಅಲ್ಲದೆ ಗುರುಮುಟ್ಟಿ ಗುರುವಾದ ಮಹಾಂತ. ಮೈಲಾರದಲ್ಲಿ, ಮೈಲಾರಲಿಂಗನ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ ದೇವಸ್ಥಾನದ ಎಡಭಾಗಕ್ಕೆ ಈತನ ಅಂಗಡಿ ಮತ್ತು ಮನೆ. ವ್ಯಾಪಾರಕ್ಕೆ ಬರು ಹೋಗುವವರೊಂದಿಗೆ ವ್ಯಾಪಾರದ ಜೊತೆಗೇನೇ ಆಧ್ಯಾತ್ಮದ ಚರ್ಚೆ; ವಸ್ತುಗಳೊಡನೆ ಆತ ಅನುಭಾವವನ್ನೂ, ಭಕ್ತಿಯನ್ನೂ ತೂಗುತ್ತಿದ್ದನು.

ಮೈಲಾರ ಬಸವಲಿಂಗಶರಣ ಶ್ರೇಷ್ಠ ಮಟ್ಟದ ಅನುಭಾವಿ ಕವಿ. ಹೆಚ್ಚಾಗಿ ಆತನ ಸಾಹಿತ್ಯ ವೀರಶೈವಾಚಾರಕ್ಕೆ ಸಂಬಂಧಿಸಿದ್ದರೂ ಮಾನವಕುಲದ ಮಹೋನ್ನತಿಯ ದರ್ಶನ ಅದರಲ್ಲಿ ಇಲ್ಲದಿಲ್ಲ. ಬಸವಲಿಂಗಶರಣ ನಾಲ್ಕು ಗ್ರಂಥಗಳನ್ನು ಬರೆದಿದ್ದಾನೆ (೧) ಷಟ್‌ಸ್ಥಲನಿರಾಭಾರ ವೀರಶೈವಸಿದ್ಧಾಂತ (೨) ಗುರುಕರುಣತ್ರಿವಿಧಿ (೩) ಶಿವಾನುಭವ ದರ್ಪಣ (೪) ಲಿಂಗಪೂಜಾ ವಿಧಾನ. ಇವು ಬಹು ಉಪಯುಕ್ತ ಗ್ರಂಥಗಳು. ಧಾರ್ಮಿಕ ಸಾಹಿತ್ಯದಲ್ಲಿ ಇವುಗಳಿಗೆ ಉನ್ನತವಾದ ಸ್ಥಾನವಿದೆ. ವಿಷಯಕ್ಕೆ ತಕ್ಕಂತೆ ಶೈಲಿ ಚೆನ್ನಾಗಿದೆ

ಮೈಲಾರ ಬಸವಲಿಂಗಶರಣ ಏಕದೇವೋಪಾಸನಾನಿಷ್ಠ. ಇಂಥ ಅನುಭಾವಿಯನ್ನು ಜಾತಿವಾದಿಗಳು "ಈತ ವಿಷ್ಣುನಿಂದಕ" ನೆಂದು ಅಧಿಕಾರಿಗಳಿಗೆ ಹೇಳಿದರು. ಈತ ಇಲ್ಲವೆಂದರೆ ಕೇಳಲಿಲ್ಲ. ಕೊನೆಗೆ ಹರಿಸ್ತೋತ್ರದ ಒಂದು ಪದ್ಯ ಹೇಳಿ ಅವರ ಬಾಯಿ ಮುಚ್ಚಿಸಿದ:

ಹರಿಯೆ ಬ್ರಹ್ಮಾಂಡ ಪಿಂಡಾಂಡ ದಶದಿಗ್‌ಭರಿತ
ಹರಿಯೆ ತ್ರೈಭುವನ ಕುಟ್ಟುಂಬ ಸಕಲಜೀವಕ್ಕಾದಿ
ಹರಿಯು ಬಿಟ್ಟರಗಳಿಗೆ ಜೀವಿಸುವರಾರಿಲ್ಲ
ಲೋಕದೊಳಗದು ಕಾರಣಂ
ಹರಿಭಕ್ತನಹುದು ಹರಭಕ್ತನಲ್ಲ ನಾಂ
ನರಸಿಂಹ ಮಧುಸೂದನ ಸಿರಿಯರಸ ವಾ
ಸರ ವೆಂಕಟಾಚಲಾದಿ ಪ್ರಣವ ಸ್ಮರಣೆಯೊಳಿರ್ಪೆಂ ಸದಾ

ಇಷ್ಟಾದರೂ ಶರಣನ ಬಗ್ಗೆ ಅಪಪ್ರಚಾರ ನಿಲ್ಲಲಿಲ್ಲ. ಮತ್ತೊಂದು ಇಂಥದೇ ಪ್ರಸಂಗ ತಂದರು ಕುಹಕಿಗಳು ಆಗ ಬಸವಲಿಂಗ ಶರಣ ಈ ಹಾಡು ಕಟ್ಟಿ ಹಾಡಿದ:

ಗೋವಿಂದನಾದಿ ಗೋವಿಂದ | ನಮ್ಮ
ಗೋವಿಂದರಾದ ಪಾವನ ಪಾಂಡುರಂಗ
ಶ್ರೀ ವಿಭೂತಿಯು ಪಂಚಗೋವಿಂದ | ವೀರ
ಶೈವಾಗಮೋಕ್ತವು ಗೋವಿಂದ
ಶಿವ ಪಂಚಾಮೃತ ಗೋವಿಂದ | ಜಗ
ಜ್ಜೀವ ಸಂತೃಪ್ತಿಯು ಗೋವಿಂದ

ಇದರಿಂದ ಪಾರ್ವರಿಗೂ ಅಧಿಕಾರಿಗಳಿಗೂ ಸಂತೋಷ ವಾಯಿತು. ಆದರೆ ಅದರಲ್ಲಿರುವ ಸುಂದರ ಶ್ಲೇಷಾರ್ಥ ಯಾರಿಗೂ ಅರ್ಥವಾಗಲಿಲ್ಲ.

ಎಮ್ಮಿಗನೂರು ಜಡೆಸಿದ್ಧ ಶಿವಯೋಗಿ

(ಕ್ರಿ. ಶ ೧೮೦೯–೧೮೯೯)

ಕನ್ನಡ ನಾಡಿನ ಸಾಂಸ್ಕೃತಿಕ ಒಂದು ಹೊಸ ತಿರುವಿಗೆ, ಲಿಂಗವಂತ ಧರ್ಮದ ಸತ್ವಸ್ಥ ಪುನರುಜ್ಜೀವನಕ್ಕೆ, ಅನುಭಾವದ ವಿಶಾಲವ್ಯಾಪ್ತಿಗೆ ಪ್ರೇರಕನಾದ ಮಹಾಕಾರಣಿಕ ಜಡೆಸಿದ್ಧ ಶಿವಯೋಗಿ.

ಹಂದ್ಯಾಳದ ಕಂಬಾಳಿಮಠದ ಚೆನ್ನಬಸವಯ್ಯ ನೀಲಾಂಬಿಕೆ ಪುಣ್ಯದಂಪತಿಗಳು. ಇವರ ಮೂರನೆಯ ಮಗನೇ ಜಡೆಸಿದ್ಧ. ಐದನೆಯ ವರ್ಷದಲ್ಲಿ ಶಾಲೆಗೆ ಹಾಕಿದರು. ಈತನಿಗೆ ಗಲಾಟೆ ಗದ್ದಲ ಸೇರುತ್ತಿರಲಿಲ್ಲ; ಮೌನ ಬಹಳ ಪ್ರಿಯವಾಗಿತ್ತು. ವಚನಗಳೆಂದರೆ ಈತನಿಗೆ ಪಂಚಪ್ರಾಣ; ಅವುಗಳನ್ನು ಮುಖಪಾಠಮಾಡುವದರಲ್ಲಿಯೇ ಬಹಳ ವೇಳೆ ಕಳೆಯುತ್ತಿದ್ದ.

ಯೌವನ ಬಂತು. ಜಡೆಪ್ಪನ ಅಭ್ಯಾಸ ಮುಗಿದಿತ್ತು. ಊರಲ್ಲಿ ಮಕ್ಕಳಿಗೆ ಓದಿಸುವ ಕಾಯಕ ಕೈಕೊಂಡ. ತಾನು ಹೆಚ್ಚಾಗಿ ಮೌನಪ್ರಿಯನಾದುದರಿಂದ ಈ ಶಿಕ್ಷಕವೃತ್ತಿ ಬಹಳ

ದಿನ ನಡೆಯಲಿಲ್ಲ. ಈತನಿಗೆ ೨೫ ತುಂಬಿದಾಗ ಗೆಣಿಕೆಹಾಳು ಮಠದ ಶಂಕರಯ್ಯನ ಮಗಳು ಗೌರಮ್ಮನೊಡನೆ ಈತನ ಮದುವೆ ಮಾಡಿದರು. ಜಡೆಪ್ಪ ಸಂಸಾರಿಯಾದ; ಒಂದು ಹೆಣ್ಣು ಮಗುವೂ ಆಯಿತು; ಶಾಂತವೀರಮ್ಮನೆಂದು ಹೆಸರಿಟ್ಟರು.

ದಿನಗಳೆದಂತೆಲ್ಲ ಜಡೆಪ್ಪನಿಗೆ ಸಂಸಾರದಲ್ಲಿ ಆಸಕ್ತಿ ಕಡಿಮೆಯಾಯಿತು. ಅಂತರಂಗದ ಹಸಿವು ಹೆಚ್ಚಾಯಿತು. ಗೂಳ್ಯದ ಗಾದಿಲಿಂಗಪ್ಪನ ಸನ್ನಿಧಿಗೆ ಹೋಗಿ ಅಧ್ಯಾತ್ಮದ ಭಿಕ್ಷೆ ಬೇಡಿದ. ೧೨ ವರ್ಷಗಳವರೆಗೆ ಆತ ಜಡೆಸಿದ್ಧನನ್ನು ಪರೀಕ್ಷಿಸಿದ. ಗಾದಿಲಿಂಗಪ್ಪ ಪ್ರತಿನಿತ್ಯ ಧರ್ಮಸಿಂಧು ಪ್ರವಚನ ಮಾಡುತ್ತಿದ್ದ. ಜಡೆಸಿದ್ಧ ನಿತ್ಯ ಹತ್ತು ಮೈಲು ದೂರದ ಗೂಳ್ಯಕ್ಕೆ ಹೋಗಿ ಧರ್ಮಸಿಂಧು ಪ್ರವಚನ ಕೇಳಿ ಬರುತ್ತಿದ್ದ ೧೨ ವರ್ಷಗಳ ಬಳಿಕ ಗಾದಿಲಿಂಗಪ್ಪ ಈತನಿಗೆ ಅನುಗ್ರಹಿಸಿದ.

ಗುರುವಿನ ಅಪ್ಪಣೆ ಪಡೆದು ಜಡೆಪ್ಪ ಶ್ರೀಶೈಲ ಯಾತ್ರೆ ಮಾಡಿ ಬಂದ. ಈಗ ಆತ ಪೂರ್ಣ ಪರಿವರ್ತನೆಯಾದ. ಸಂಸಾರದ ಯಾವ ಬಂಧನವೂ ಉಳಿಸಿಕೊಳ್ಳಲಿಲ್ಲ. ಹೆಚ್ಚು ಕಡಿಮೆ ಪರವಶದಲ್ಲಿಯೇ ಇರುತ್ತಿದ್ದ. ನಾಲ್ವತ್ತು ವರ್ಷ ತುಂಬಿದ ಜಡೆಪ್ಪ ಈಗ ಜಡೆಸಿದ್ಧ ಶಿವಯೋಗಿಯಾದ. ಮಾನವ ಕಲ್ಯಾಣಕ್ಕಾಗಿ ಆತನಿಂದ ಅನೇಕ ಪವಾಡಗಳಾದುವು.

ಒಂದು ದಿನ ಊರವರಿಗೆಲ್ಲ ಹೇಳಿ ಊರುಬಿಟ್ಟು ನಡೆದ. ಅನೇಕ ಕಡೆ ಸಂಚರಿಸಿ ಎಮ್ಮಿಗನೂರಿಗೆ ಬಂದ. ಭಕ್ತರ

ಆಗ್ರಹದಂತೆ ಅಲ್ಲಿಯೇ ಉಳಿದುಬಿಟ್ಟ. ಅವರೂರಲ್ಲಿ ಯಾವಾಗಲೂ ಸಿಂಪಿಗರ ಕಟ್ಟೆಮೇಲೆ ಕೂತಿರುತ್ತಿದ್ದ. ಭಕ್ತರು ಅಲ್ಲಿಗೇ ಬಂದು ದರ್ಶನ ತೆಗೆದುಕೊಳ್ಳುತ್ತಿದ್ದರು. ಇಲ್ಲಿ ಕೆಲವು ಪವಾಡಗಳು ನಡೆದುವು.

ಹಾನಗಲ್ಲ ಕುಮಾರಸ್ವಾಮಿಯ ಪೂರ್ವಾಶ್ರಮದ ಹೆಸರು ಹಾಲಯ್ಯ. ಚಿಕ್ಕಂದಿನಿಂದಲೇ ಆಧ್ಯಾತ್ಮದ ಗೀಳಿದ್ದ ಹಾಲಯ್ಯ ಯೌವನದಲ್ಲಿ ಹುಬ್ಬಳ್ಳಿಯ ಸಿದ್ಧಾರೂಢರ ವೇದಾಂತದ ಪ್ರವಚನಕ್ಕೆ ಮಾರುಹೋದ. ಆದರೆ ಅವರ ಇಷ್ಟಲಿಂಗ ತ್ಯಾಗ ಹಾಲಯ್ಯನಿಗೆ ಸರಿಬರಲಿಲ್ಲ. ಹುಬ್ಬಳ್ಳಿಯ ರುದ್ರಾಕ್ಷಿಮಠದಲ್ಲಿ ಸ್ನಾನ ಪೂಜೆ ಮಾಡಿ ಕಂತಿಭಿಕ್ಷೆಯಿಂದ ಪ್ರಸಾದ ಸೇವಿಸಿ ಸಿದ್ಧಾರೂಢರ ಮಠದಲ್ಲಿ ವೇದಾಂತದ ಪ್ರವಚನ ಕೇಳುತ್ತಿದ್ದ. ಆದರೆ ಬರಬರುತ್ತ ಆತನಿಗೆ ಇಷ್ಟಲಿಂಗವಿರಹಿತವಾದ ಆ ವೇದಾಂತ ಪ್ರವಚನದಲ್ಲಿ ಮನವಿಲ್ಲದಾಯಿತು. ಯೋಗಿಗೆ, ಆರೂಢನಿಗೆ ಇಷ್ಟಲಿಂಗವು ಬೇಕೋ ಬೇಡವೋ ಎಂಬ ಪ್ರಶ್ನೆ ತಲೆತಿನ್ನಹತ್ತಿತು. ಇದಕ್ಕೆ ಉತ್ತರ ಯಾರಿಂದ ಸಿಕ್ಕೀತು ಎಂಬ ಚಿಂತೆಯಲ್ಲಿದ್ದಾಗ ಹುಬ್ಬಳ್ಳಿಯ ಎರಡಿಟ್ಟಿನ ಮಠದ ಸ್ವಾಮಿಗಳ ಸಲಹೆಯಂತೆ ಎಮ್ಮಿಗನೂರ ಜಡೆಸಿದ್ಧನ ದರ್ಶನಕ್ಕೆ ಹಾಲಯ್ಯ ಒಬ್ಬ ಸಹಚರನೊಡನೆ ಬಂದ.

"ಅಂಗಳ ಸ್ವಚ್ಛ ಮಾಡಿರಿ, ಚಳೆಯ ಕೊಡಿರಿ, ಊರ ಎಲ್ಲ ಭಕ್ತರನ್ನು ಕರೆಯಿರಿ. ಒಬ್ಬ ಮಹಾಶಿವಯೋಗಿ ಬರುತ್ತಿದ್ದಾನೆ"

ಎಂದು ಜಡೆಸಿದ್ಧಯೋಗಿ ಅಲ್ಲಿದ್ದವರಿಗೆ ಹೇಳಿದ. ಈತನನ್ನು ಮಹಾ ಆರೂಢ ಎನ್ನುವದಕ್ಕಿಂತಲೂ ನಡೆದಾಡುವ ಪರಜ್ಯೋತಿ ಎನ್ನಬೇಕು. ತಾನೇ ಲಿಂಗವಾಗಿದ್ದ. ಆದ ಕಾರಣ ಲಿಂಗ ಧರಿಸಿರಲಿಲ್ಲ. ಆದರೆ ಲಿಂಗ ಧರಿಸಬಾರದೆಂಬ ವಿಚಾರ ಆವರ ದಾಗಿರಲಿಲ್ಲ. ಇದನ್ನು ಕುಮಾರ ಸ್ವಾಮಿಗೆ ತಿಳಿಸ ಬೇಕಾಗಿತ್ತು. ಆದುದರಿಂದ ಪಕ್ಕದಲ್ಲಿದ್ದವರ ಲಿಂಗವಸ್ತ್ರವನ್ನೇ ಕಸಿದು ಲಿಂಗದಾಕಾರವಮಾಡಿ ಕೊರಳಿಗೆ ಕಟ್ಟಿಕೊಂಡ ಹಾಲಯ್ಯ ಬಂದ. ಜಡೆಸಿದ್ಧನೇ ಮೊದಲು ಆತನಿಗೆ ವಂದಿಸಿದ; ಹಾಲಯ್ಯ ಜಡೆಸಿದ್ಧಯೋಗಿಗೆ ನಮಿಸಿ ಕುಳಿತ ಕಣ್ತುಂಬಿ, ಹೃದಯ ತುಂಬಿ, ಭಕ್ತಿತುಂಬಿ ಜಡೆಸಿದ್ಧನನ್ನು ನೋಡಿದ. "ಇಷ್ಟಲಿಂಗ ಬಿಡಕೂಡದೆಂದು" ಆತನಿಗೆ ಅರ್ಥವಾಯಿತು "ಮುಂದೆ ಏನು ?" ಎಂದು ಹಾಲಯ್ಯನ ಮನದಲ್ಲಿ ಸುಳಿದ ಪ್ರಶ್ನೆಗೆ ಜಡೆಸಿದ್ಧಯೋಗಿ ತಟ್ಟನೆ, "ಬಂದಿರುವುದೆಲ್ಲಿಂದ ಕಂಡನೆ ಚಂದದಿಂದಲ್ಲಿಗೆ ಪೋಗು ನಿಲ್ಲದೆ;.... ಮುಂದೆ ನೀ ಜಗವಂದ್ಯ ನಾಗುವಿ...... ಸಂದಿಸದಿರು ಆರೂಢರಾಮತ ನೀನೆಂದೂ..." ಎಂದು ನುಡಿದ. ಹಾಲಯ್ಯ ಧನ್ಯನಾಗಿ ಹೊರಟ.

ಅಂದು ಜಡೆಸಿದ್ಧನಿಂದ ಹಾಲಯ್ಯನಿಗೆ ಮಾರ್ಗದರ್ಶನ ದೊರಕದಿದ್ದರೆ ಮುಂದೆ ಆತ ಹಾನಗಲ್ ಕುಮಾರಸ್ವಾಮಿಯೂ ಆಗುತ್ತಿರಲಿಲ್ಲ; ಶಿವಯೋಗ ಮಂದಿರವೂ ಅಸ್ತಿತ್ವಕ್ಕೆ ಬರುತ್ತಿರ ಲಿಲ್ಲ; ನಾಡು ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿ ಒಂದು ಹೊಸ ಹುಟ್ಟನ್ನೂ ಕಾಣುತ್ತಿರಲಿಲ್ಲ.

ಜಡೆಸಿದ್ಧ ಶಿವಯೋಗಿ ಶಾ. ಶ. ೧೮೨೨ ಶಾರ್ವರಿ ಸಂವತ್ಸರ ಮಾರ್ಗಶಿರ ಶುದ್ಧ ಪಂಚಮಿ ಸೋಮವಾರ ಬೆಳಗಿನ ಜಾವದಲ್ಲಿ ಲಿಂಗದೊಳಗಾದನು.

ಹಾಲ್ವಿಯ ಶ್ರೀ ಚರಣಗಿರಿ ಬೃಹನ್ಮಠದ

ಮಹಾಂತಯತಿ

(ಕ್ರಿ. ಶ. ೧೮೮೬)

ಹಾಲ್ವಿ ಶ್ರೀ ಚರಣಗಿರಿ ಬೃಹನ್ಮಠದ ಮೂಲಸ್ವಾಮಿ ಮಹಾಂತಯತಿ. ಈತನ ಮೂಲ ಹುಟ್ಟಿದೂರು, ತಂದೆ-ತಾಯಿ ಯಾವುದೂ ತಿಳಿಯದು. ಆತ ಮೊದಲಿಗೆ ಬೆಟ್ಟದಪುರದಲ್ಲಿ ಪ್ರಕಟವಾದ.

ಬೆಟ್ಟದಪುರ ಮೈಸೂರು ಜಿಲ್ಲೆಯಲ್ಲಿದೆ. ಅಲ್ಲೊಂದು ವಿರಕ್ತ ಮಠ. ಚಿಕ್ಕವೀರ ದೇಶಿಕೇಂದ್ರ ಈ ಮಠದ ಸ್ವಾಮಿ; ಮೈಸೂರು ಅರಸರ ಗುರು. ಒಂದು ದಿನ ಮಹಾಂತಯತಿ ಚಿಕ್ಕವೀರ ದೇಶಿಕೇಂದ್ರನ ಮುಂದೆ ಬಂದು ನಿಂತ. ಅವರಿಬ್ಬರ ಆತ್ಮಗಳು ಮಾತಾಡಿದುವು. "ತಾವು ಇಲ್ಲಿಯೇ ಇರುವ ಕೃಪೆಮಾಡ

ಬೇಕು" ಚಿಕ್ಕವೀರ ದೇಶಿಕೇಂದ್ರ ವಿನಂತಿಸಿದ. ಮಹಾಂತಯತಿ ಅಲ್ಲಿ ಉಳಿದ. ಬಸವಪುರಾಣ ಪ್ರವಚನ ನಡೆಸಿದ. ಮೂರು ನಾಲ್ಕು ವರ್ಷಗಳ ಬಳಿಕ 'ಆಡಿ ಕೆಲನು, ನೋಡಿ ಕೆಲನು, ನುಡಿಸಿ ಕೆಲರನು' ಉದ್ಧರಿಸಲು ಪ್ರಯಾಣ ಕೈಕೊಂಡ. ಅಲ್ಲಿ ಇಲ್ಲಿ ಸಂಚರಿಸಿ ಶ್ರೀಶೈಲಕ್ಕೆ ಬಂದ; ಪಾತಾಳಗಂಗೆಯ ದಡದಲ್ಲಿ ಎಲೆ ವನೆ ರಚಿಸಿಕೊಂಡು ತಪಸ್ಸಿಗೆ ಕುಳಿತ. ಕೆಲಕಾಲದ ಬಳಿಕ, "ಇಲ್ಲಿಂದ ಪಶ್ಚಿಮಕ್ಕೆ ನಡೆ, ಅಲ್ಲೊಂದು ಬೆಟ್ಟ; ಮೇಲೊಂದು ಸಣ್ಣ ಗುಡಿ; ಗುಡಿಯ ಮುಂದಿನ ಗುಂಡಿನ ಮೇಲೆ ಪಾದದ ಗುರುತುಗಳು, ಅವು ನಿನ್ನ ಪಾದಕ್ಕೆ ಸರಿಹೋಗುವವು" ಎಂದು ಮಲ್ಲಿಕಾರ್ಜುನವಾಣಿಯಾಯಿತು.

ಮಹಾಂತ ಯತಿ ಪಶ್ಚಿಮಾಭಿಮುಖವಾಗಿ ನಡೆದ; ಹೆಗಲಿನಲ್ಲಿ ಅಣ್ಣನವರ ವಚನದ ಕಟ್ಟು, ಕೈಯಲ್ಲೊಂದು ಕೋಲು, ಬಾಯಲ್ಲಿ ಬಸವ ಪ್ರಣವಾಕ್ಷರ. ಆದವಾನಿ ತಾಲೂಕಿನ ಕವಿತಾಳಕ್ಕೆ ಬಂದ. ಇಲ್ಲಿ ಒಂದೆರಡು ವರ್ಷ ಬಸವಪುರಾಣ ಪ್ರವಚನ ನಡೆಸಿದ. ಅಲ್ಲಿಂದ ಹಾಲ್ವಿಗೆ ಹೋದ.

ಹಾಲ್ವಿಯ ಪಶ್ಚಿಮಕ್ಕೆ ಬೆಟ್ಟಗಳ ಸಾಲು, ಬೆಟ್ಟಗಳ ದಡದಲ್ಲಿ ಸಿದ್ಧೇಶ್ವರ ದೇವಾಲಯ. ಮಹಾಂತಯತಿ ಅಲ್ಲಿ ತಂಗಿದ. ಹೂ ತಾನು ಅರಳುವೆನೆಂದು ಜನರಿಗೆ ಕೂಗಿ ಹೇಳುವದೇ? ಅದರಂತೆ ಯತಿಗಳು ನಾವು ಬಂದಿದ್ದೇವೆ ಎಂದು ಡಂಗುರ ಸಾರುತ್ತಾರೆಯೆ? ಸುತ್ತು ಎಂಟು ಹತ್ತು ಹಳ್ಳಿಯ ಜನ ಬಂದರು.

ಸಿದ್ಧೇಶ್ವರ ದೇವಾಲಯ ಅನುಭವಮಂಟಪವಾಯಿತು; ಪ್ರವಚನ ನಡೆಯಿತು

ಹಾಲ್ವಿಯಿಂದ ಬೇರೆಡೆಗೆ ಹೋಗ ಬಯಸಿದ ಯತಿ; ಆದರೆ ಭಕ್ತರು ಬಿಡಲಿಲ್ಲ. ಒಂದು ದಿನ ಬೆಳಗ್ಗೆ ಲಿಂಗಪೂಜೆ ಮುಗಿಸಿ ಮಹಾಂತ ಯತಿ ಬೆಟ್ಟ ಹತ್ತಿದ. ಅಲ್ಲೊಂದು ಗುಡಿ, ಗುಡಿಯ ಮುಂದಿನ ಬಂಡೆಗಲ್ಲ ಮೇಲೆ ಪಾದದ ಗುರುತುಗಳು; ಅವುಗಳ ಮೇಲೆ ಆತ ತನ್ನ ಪಾದವಿಟ್ಟ; ಸರಿಹೋಯಿತು. ಮಲ್ಲಿಕಾರ್ಜುನವಾಣಿ ನೆನಪಾಯಿತು. ಬೆಟ್ಟವಿಳಿದು ಬಂದ; ಇಲ್ಲಿಯೇ ವಾಸಿಸುವೆನೆಂದು ಭಕ್ತರಿಗೆ ಹೇಳಿದ; ಭಕ್ತರ ಸಂತೋಷವನ್ನು ಯಾರು ಅಳೆಯಬೇಕು?

ಬೆಟ್ಟದ ಪಡವಲ್ಲಿ ಆಶ್ರಮ ರಚನೆಯಾಯಿತು; ಪ್ರವಚನ, ದಾಸೋಹ ನಡೆದವು. ಕೆಲವೇ ದಿನಗಳಲ್ಲಿ ಹಾಲ್ವಿ ಸುಕ್ಷೇತ್ರ ವಾಯಿತು.

ಭಕ್ತರು ಮಠ ಕಟ್ಟಿಸಲು ನಿಶ್ಚಯಿಸಿದರು. ಭಕ್ತಿಯಿದ್ದಲ್ಲಿ ಸಂಪತ್ತಿಗೆ ಕೊರತೆಯೆ? ಮಠದ ರಚನೆ ಸಾಗಿತು.

ಮಹಾಂತ ಯತಿಯ ಅನುಕಂಪೆಗೆ ಸೀಮೆಯಿಲ್ಲ ಭಕ್ತರಿಂದ ಬಂದ ಹಣ ಬಡಬಗ್ಗರಿಗೆ ಕೊಡುತ್ತಿದ್ದ; ಅನಾಥರೇ ಅವನಿಗೆ ಜಂಗಮಸ್ವರೂಪರು. ಜಾತಿ, ಮತ, ಕುಲ, ಪಂಥ ಗಳ ಎಲ್ಲೆ ಆತ ಮೀರಿದ್ದ. ಸರ್ವಜೀವರೂ ಶಿವ ಸ್ವರೂಪಿ

ಗಳೆಂದು ನಂಬಿ ಆತ ನಡೆಯುತ್ತಿದ್ದ. ಇಂದಿಗೂ ಚರಣಗಿರಿ ಮಠಕ್ಕೆ ಸರ್ವಮತದವರೂ ಬರುತ್ತಾರೆ.

ಮಠದ ಕಟ್ಟಡ ಕೆಲಸ ನಡೆದಿತ್ತು. ಗೋಡೆಯ ಮೇಲೆ ನಿಂತು ಕಟ್ಟುತ್ತಿದ್ದ ಕಲ್ಲಪ್ಪನಿಗೆ ಆತನ ಮಗ ಗುಂಡಪ್ಪ ಕಲ್ಲನ್ನು ಕೊಡುತ್ತಿದ್ದ. ಕಲ್ಲಪ್ಪನ ಕೈಜಾರಿ ಕಲ್ಲು ಗುಂಡಪ್ಪನ ಕಾಲ ಮೇಲೆ ಬಿತ್ತು. ಎಲ್ಲಿದ್ದನೋ ಮಹಾಂತ ಯತಿ; ಒಂದೇ ಉಸಿರಿಗೆ ಓಡಿಬಂದು ರಕ್ತ ಸೋರದಂತೆ ಗುಂಡಪ್ಪನ ಕಾಲನ್ನು ಅದುಮಿ ಹಿಡಿದ ಯತಿಗೆ ಅವರಿವರೆಂಬ ಭೇದವೆಲ್ಲಿ? ಶಿವಭಕ್ತರ ನೋವೇ ಅವನ ನೋವು. ಆ ನೋವನ್ನು ನಲುಮೆ ಮಾಡುವುದೇ ಆತನ ಕಾಯಕ.

ಇನ್ನೊಂದು ದಿನ; ದನ ಕಾಯುವ ಹುಡುಗನನ್ನು ಚಿರ್ಚು ಬೆನ್ನಟ್ಟಿತು. ಆ ಹುಡುಗ ಕೂಗುತ್ತ ಓಡಿ ಬಂದು ಮಠದ ಮುಂದಿನ ಬಾವಿಯಲ್ಲಿ ಹಾರಿದ. ಚಿರ್ಚು ಬಾವಿಯ ಮೇಲೆ ನಿಂತಿತ್ತು. ಜನ ದೂರದಿಂದ ಅಸಹಾಯಕರಾಗಿ ನೋಡಿದರು. ಮಹಾಂತ ಯತಿ ಓಡಿದ; ಚಿರ್ಚು ಆತ ಬರುವುದನ್ನು ನೋಡಿ ಪಲಾಯನಮಾಡಿತು. ಯತಿ ಬಾವಿಯಲ್ಲಿ ಹಾರಿ ಹುಡುಗನ ಪ್ರಾಣ ರಕ್ಷಿಸಿದ.

ಇನ್ನು ಮೂರು ವರ್ಷ ತನ್ನ ಇಹಲೋಕದ ಜೀವನವೆಂದು ಮಹಾಂತ ಯತಿ ತಿಳಿದ; ಬಸವಪುರಾಣ ಪ್ರಾರಂಭಿಸಿದ ನಿರಂತರ ಮೂರು ವರ್ಷ ಜ್ಞಾನದಾಸೋಹ ನಡೆಯಿತು. ಬಳ್ಳಾರಿ,

ರಾಯಚೂರು, ಗುಲ್ಬರ್ಗಾ, ವಿಜಾಪುರ, ಕರ್ನೂಲು ಮುಂತಾದೆಡೆಗಳಿಂದ ಲಕ್ಷ ಸಂಖ್ಯೆಯಲ್ಲಿ ಭಕ್ತರು ಹಾಲ್ಕಿಗೆ ಬಂದರು; ತಮ್ಮ ಬದುಕಿಗೆ ಬೇಕಾದ ಪುರುಷಾರ್ಥವನ್ನು ಅಲ್ಲಿ ಪಡೆದರು. "ದಿನದಿಂದೆ ಹಣೆಯ ದುರ್ಲಿಖಿತಮಂ ತೊಡೆವಂಗೆ" ಎಂದು ಸಾರಿದ ವೀರವ್ರತಿ ಘನಮಠಶಿವಯೋಗಿ ಶರಣರ ತತ್ವಗಳನ್ನೆ ಉಸಿರಾಡಿಸಿದ ಅಥಣಿಯ ಮುರುಘೇಂದ್ರ ಮಹಾಸ್ವಾಮಿಗಳು ಬಸವಪುರಾಣದ ಪ್ರವಚನದ ಕಾಲಕ್ಕೆ ಹಾಲ್ಕಿಗೆ ಬಂದರು

ಪುರಾಣ ಮಂಗಳವಾಯಿತು ಮಹಾಂತ ಯತಿ ಭಕ್ತರನ್ನು ನೆರಸಿ, ತನ್ನ ಮಣಿಹ ಮುಗಿದುದನ್ನು ತಿಳಿಸಿ ಶಾ. ಶ. ೧೮೦೭, ಚೈತ್ರಶುದ್ಧ ತೃತೀಯದಂದು ಲಿಂಗದಲ್ಲಿ ಒಂದಾದನು.

ಬೇಳ್ಳಗುರಿಕಿ ಎರ್ರಿಸ್ವಾಮಿ

(ಕ್ರಿ. ಶ. ೧೮೯೦)

ಈ ಶತಮಾನದ ಅತ್ಯಂತ ಶ್ರೇಷ್ಠ ಅನುಭಾವಿಗಳಲ್ಲಿ ಎರ್ರಿಸ್ವಾಮಿ ಒಬ್ಬ. ಆತ ನಿಗ್ರಹಾನುಗ್ರಹ ಸಮರ್ಥ; ಲಕ್ಷ ಲಕ್ಷ ಜನಗಳ ಹೃದಯದಲ್ಲಿ ನೆಲಸಿದ ಪುಣ್ಯಪುರುಷ. ಈತನ

ಪೂರ್ವೇತಿಹಾಸ ಸರಿಯಾಗಿ ತಿಳಿಯದು. ಚೇಳ್ಳಗುರಿಕಿಗೆ ಬಂದಾಗ ಪೂರ್ಣ ಪರವಶ ಸ್ಥಿತಿಯಲ್ಲಿದ್ದ.

"ಎರ್ರಿತಾತನ ಪೂರ್ವದ ಹೆಸರು ನಂಜುಂಡಯ್ಯ, ಆರಾಧ್ಯವೀರಶೈವ; ವಿದ್ಯಾಸಂಪನ್ನ; ಸದ್ಗೃಹಸ್ಥ, ಉನ್ನತ ಅಧಿಕಾರಿಯಾಗಿದ್ದ. ತರುವಾಯ, ವೈರಾಗ್ಯ ತಾಳಿ ಸಂಸಾರ ತ್ಯಾಗಮಾಡಿದ"–ಇದಿಷ್ಟು ಖಚಿತವಾಗಿ ತಿಳಿದ ಚರಿತ್ರೆ.

ಕ್ರಿ. ಶ. ೧೮೯೭ (ಹೇವಿಳಂಬಿ ಸಂ) ರಲ್ಲಿ ಎರ್ರಿತಾತ ಚೇಳ್ಳಗುರಿಕಿಗೆ ಬಂದ. ಊರಹೊರಗಿನ ಮಲ್ಲಪ್ಪನ ತಿಪ್ಪೆಯ ಹತ್ತಿರ ಕುಳಿತಿದ್ದ. ಊರವರು ಮೂರು ನಾಲ್ಕು ದಿನ ಬೇಡಿಕೊಂಡ. ಬಳಿಕ ಊರೊಳಗೆ ಹೋದ. ಕೆಲವು ದಿನ ಈಶ್ವರನ ಗುಡಿಯಲ್ಲಿ ಮತ್ತೆ ಕೆಲವು ದಿನ ಭಕ್ತರ ಮನೆಯಲ್ಲಿ ಇದ್ದ. ಆತ ತನ್ನೊಳಗೆ ತಾನೇ ಆಗಿರುತ್ತಿದ್ದ. ಬಟ್ಟೆ ಉಟ್ಟರೆ ಉಟ್ಟ, ಇಲ್ಲದಿದ್ದರೆ ಇಲ್ಲ. ಭಕ್ತರು ಉಡಿಸಿದ್ದೇ ಸರಿ; ಊಟಕ್ಕೆ ಕೊಟ್ಟದ್ದೇ ಸಾಕು. ಒಮ್ಮೊಮ್ಮೆ ಕಾಡಿ ಬೇಡಿ ತಿನ್ನುತ್ತಿದ್ದ. ಜಗದ ಕಣ್ಣಿಗೆ ಹುಚ್ಚನಂತೆ, ಎರ್ರಿಯಂತೆ ಕಾಣುತ್ತಿದ್ದ. ಅಂತೆಯೇ ಜನರು–ಅವರಿಗೆ ತಾತನ ಪೂರ್ವದ ಹೆಸರು ಗೊತ್ತಿರಲಿಲ್ಲ, ಎರ್ರಿತಾತ ಎಂದರು. ಅದೇ ಹೆಸರು ಉಳಿಯಿತು.

ಎರ್ರಿತಾತ ಚೇಳ್ಳಗುರಿಕಿಗೆ ಬಂದ ನಾಲ್ಕೈದು ವರ್ಷಗಳಲ್ಲಿ ಒಬ್ಬ ಭಕ್ತ ಬಂದ; ತಾತನ ಸೇವೆಯಲ್ಲಿ ನಿರತನಾದ ತಾತನಂತೆ ಈತನ ಪೂರ್ವದ ಚರಿತೆಯೂ ತಿಳಿಯದು ಈತನ

ನಡತೆಯೂ ವಿಚಿತ್ರವೇ ಆಗಿತ್ತು. ತಾತನಿಗೆ ಎರ್ರಿ ಎಂದ ಜನ ಈತನಿಗೆ "ತಿಕ್ಕಯ್ಯ" ಎಂದರು. ತಿಕ್ಕಯ್ಯ ಸಹಜಕವಿ. ಎರ್ರಿ ತಾತನನ್ನು ಕುರಿತು ಬರೆದ ಆತನ ಪದ್ಯಗಳು ಆತನ ಭಕ್ತಿ ನಿರ್ಭರತೆಯನ್ನು, ಅನುಭಾವವನ್ನು ಚಿತ್ತರಿಸುತ್ತವೆ.

ತಿಕ್ಕಯ್ಯ ಸಾಹಸವೆಸಗಿ ಎರ್ರಿತಾತನಿಗೆ ಭಕ್ತರಿಂದ ಹಣ ಕೂಡಿಸಿ ಒಂದು ಭವ್ಯಮಠವನ್ನು ಕಟ್ಟಿಸಿದನು. ಊರೊಳಗಿನಿಂದ ತಾತನನ್ನು ಆ ಮಠಕ್ಕೆ ಕರೆತರಲು ಒಂದು ಹಗರಣವೇ ಆಯಿತು. ಊರಲ್ಲಿ ಎರಡು ಪಾರ್ಟಿ : ಒಂದು ಪಾರ್ಟಿ ತಾತ ಊರಲ್ಲಿರಲಿ ಎನ್ನುತ್ತಿತ್ತು; ಇನ್ನೊಂದು ಪಾರ್ಟಿ ಮಠಕ್ಕೆ ಬರಲಿ ಎನ್ನುತ್ತಿತ್ತು. ದೊಡ್ಡ ಜಗಳವಾಗುವ ಪ್ರಸಂಗವೇ ಇತ್ತು. ತಾತನನ್ನು ಕೇಳಿದರೆ "ರಿಜರ್ವ ಬರಲೀಳಯ್ಯ" ಎಂದನಂತೆ. ಸರಿ ಕೊನೆಗೆ ರಿಜರ್ವ ಪೊಲೀಸ ಪಡೆ ಬಂತು ಪೋಲೀಸು ಅಧಿಕಾರಿ ತಾತನನ್ನು "ಊರಲ್ಲಿರುವಿರೋ ಮಠಕ್ಕೆ ಬರುವಿರೋ?" ಎಂದು ಕೇಳಿದ. "ನಡೆಯಯ್ಯಾ ಹೋಗೋಣ" ಎಂದು ತಾತ ಮಠಕ್ಕೆ ಬಂದ.

ಮಠ ಕಟ್ಟಿಸಿ ತಾತನನ್ನು ಮಠಕ್ಕೆ ಕರೆತಂದ ತಿಕ್ಕಯ್ಯ ಮಠದಲ್ಲಿ ಬಹಳ ದಿನ ಉಳಿಯಲಿಲ್ಲ. ಒಂದು ದಿನ ಇದ್ದಕ್ಕಿದ್ದಂತೆ ಎರ್ರಿತಾತ, "ನೀನು ಹೋರಟು ಹೋಗಯ್ಯ" ಎಂದ. ಮರು ಮಾತಾಡದೆ, ಯಾಕೆ ಏನು ಎಂದು ಕೇಳದೆ ತಿಕ್ಕಯ್ಯ ಹೊರಟು ಬಿಟ್ಟ. ಎಲ್ಲಿಗೆ ಹೋದನೋ ತಿಳಿಯದು. ತಾತ ಹಾಗೆ ಏಕೆ ಹೇಳಿದನೆಂಬುದೂ ತಿಳಿಯದು.

ದಿನಗಳೆದಂತೆ ಎಗ್ರಿತಾತನ ಮಹಾತ್ಮೆ ಎಣ್ದೆಸೆಗೆ ಹಬ್ಬಿತು. ನಿತ್ಯ ನೂರಾರು ಜನ ಆತನ ದರ್ಶನಕ್ಕೆ ಬರತೊಡಗಿದರು. ತಾತ ಮಾತಾಡಿದರೆ ಆಡಿದ, ಇಲ್ಲದಿದ್ದರೆ ಇಲ್ಲ. ಆತನ ಸಹಜ ಸ್ಥಿತಿಯು ಲೀಲೆಯೋ ಲೀಲೆ. ಈ ಸಹಜ ಸ್ಥಿತಿ ಅನಂತ ಪವಾಡಗಳನ್ನು ಮೆರೆಯಿಸಿತು. ತಾತ ಆಡಿದ್ದು ಶಿವ, ಮಾಡಿದ್ದು ಶಿವ, ನೋಡಿದ್ದು ಶಿವ, ಮುಟ್ಟಿದ್ದು ಶಿವ. ಲೋಕದ ನಂಜುಂಡು ಜನಕ್ಕೆ 'ಶಿವ' ವನ್ನಿತ್ತ ಈ ಮಹಾತ್ಮ ಶಾ. ಶ. ೧೮೪೭ (ಕ್ರಿ. ಶ. ೧೯೨೨) ದುಂದುಭಿನಾಮ ಸಂವತ್ಸರದ ಜೇಷ್ಠ ಶುದ್ಧ ಚತುರ್ಥಿಯಂದು ಉದಯ ಹತ್ತು ಗಂಟೆಗೆ ಬಯಲಾದ.

ಸಮಾರೋಪ

ನಾವು ನಮ್ಮ ಅನುಕೂಲಕ್ಕೆ ಒಂದು ಸೀಮೆ, ಒಂದು ಜಿಲ್ಲೆ ಎಂದು ಮಾಡಿಕೊಂಡಿದ್ದೇವೆಯೇ ಹೊರತು ಶಿವಶರಣನಿಗೆ ಯಾವ ಸೀಮೆಯೂ ಇಲ್ಲ; ಅವನು ಸೀಮಾತೀತ; ಸರ್ವ ಲೋಕಕ್ಕೆ ಸೇರಿದಾತ. ಒಂದು ಜಿಲ್ಲೆಯಷ್ಟು ಪರಿಸರದಲ್ಲಿ ಒಂದು ಸಾವಿರ ವರ್ಷದ ಅವಧಿಯಲ್ಲಿ ಇನ್ನೂರಕ್ಕೂ ಹೆಚ್ಚು ಶಿವಶರಣರು ಜನ್ಮ ತಳೆದುದು ಸಾಮಾನ್ಯವಾದುದೇನೂ ಅಲ್ಲ; ಇದರಿಂದ ಈ ನೆಲದ ಸತ್ವವನ್ನೂ ನಾವು ಅಳೆಯಬಹುದು.

ಈ ಜಿಲ್ಲೆಯ ಶಿವಶರಣರಲ್ಲಿ ಎಲ್ಲ ಬಗೆಯವರೂ ಎಲ್ಲ ಹಂತದವರೂ ಇದ್ದಾರೆ; ಯಾಕೆಂದರೆ ಈ ಹಂತಗಳನ್ನು ಅಳಿಸಿ ಏಕತೆ ತರಬೇಕಾಗಿತ್ತು. ರಾಜರು, ಸಂನ್ಯಾಸಿಗಳು, ಸಂಸಾರಿಗಳು, ವಿರತರು, ಸಕಲ ಕಾಯಕದವರು, ರಾಜ್ಯ ಪ್ರತಿಷ್ಠಾಪನೆ ಮಾಡಿದವರು, ತಪಸ್ವಿಗಳು, ಹೆಂಗಸರು, ಯೋಗಿಗಳು, ಭೋಗಿಗಳು, ಅಧಿಕಾರಿಗಳು, ಕವಿಗಳು– ಒಟ್ಟು ಮಹಾ ಸಮಾಜದ ಪ್ರಾತಿನಿಧ್ಯ ಇಲ್ಲಿದೆ. ಇವರೆಲ್ಲರ ಗುರಿಯೊಂದೇ: ಲೋಕ ಕಲ್ಯಾಣ.

ಇವರು ಏನು ಮಾಡಿದರು, ಏನು ಮಾಡಲಿಲ್ಲ: ನೂರೊಂದು ವಿರಕ್ತರಂತೆ, ಕುರುಗೋಡು ರಾಚಮಲ್ಲನಂತೆ,

ಕ್ರಿಯಾಶಕ್ತಿಯಂತೆ ದೇಶದ ಸ್ವಾತಂತ್ರ್ಯ ಶಕ್ತಿ ಬಲಗೊಳ್ಳಲು ಶ್ರಮಿಸಿದರು; ಸಕ್ಕರೆ ಕರಡೆಪ್ಪನಂತೆ ಜ್ಞಾನದಾಸೋಹ ನಡೆಸಿ ಅಜ್ಞಾನ ಕಳೆದರು. ಕೊಟ್ಟೂರ ಬಸವೇಶ್ವರ, ಮರಿಸ್ವಾಮಿ, ಮೈಲಾರ ಬಸವಲಿಂಗ ಶರಣ, ಎರ್ರಿಸ್ವಾಮಿ, ತಿಕ್ಕಯ್ಯ ಇವರಂತೆ ನಿತ್ಯ ಜೀವನವನ್ನು ಅನುಭಾವದ ಮಟ್ಟಕ್ಕೆ ಏರಿಸಿದರ; ತಮ್ಮ ಅನುಕಂಪೆಯಿಂದ, ನಡೆನುಡಿಯಿಂದ, ಸಾಹಿತ್ಯದಿಂದ ಜನರ ಮನದ ಮಾಲಿನ್ಯ ಕಳೆದರು. ಮಹಾಂತಯತಿ ಮತ್ತು ಮರುಳ ಸಿದ್ಧರಂತೆ ಜಾತೀಯತೆಯ ತಾಯ್ ಬೇರನ್ನೇ ಕಿತ್ತೊಗೆದರು. ಮನುಷ್ಯನ ಮಾನಸಿಕ ವ್ಯಾಪಾರಗಳು ವ್ಯಭಿಚಾರಕ್ಕೆಳಸಲು ಅನುವು ಮಾಡಿಕೊಡುವ ಸಿದ್ಧಿಗಳನ್ನು ತಿರಸ್ಕರಿಸಿದರು; ಸಿದ್ಧರ ಹೃದಯಗಳನ್ನು ಶುದ್ಧಗೊಳಿಸಿದರು. ಜಡೆಸಿದ್ಧ ಶಿವಯೋಗಿ ಯಂತೆ ಒಂದು ಸಾಂಸ್ಕೃತಿಕ ಹೊಸ ಹುಟ್ಟಿಗೇ ಕಾರಣರಾದರು.

ಇಷ್ಟೇ ಅಲ್ಲ: ಧರ್ಮದಿಂದ, ಸಮಾಜದ ಅನುಕೂಲ ಗಳಿಂದ, ದೇವರಿಂದ, ವೈಚಾರಿಕತೆಯಿಂದ, ಸ್ವಾತಂತ್ರ್ಯದಿಂದ ಬಹುಜನ ಸಮಾಜವನ್ನು ತುಳಿದಿಟ್ಟು, ಇವು ಯಾವೂ ಅವರಿಗೆ ದೊರಕದಂತೆ ಮಾಡಿದ ಪುರೋಹಿತಶಾಹಿಯನ್ನು ಅಳಿಸಿ ಸರ್ವ ಸಮಾನತೆ ತಂದರು; ದೇವರನ್ನು 'ಸೆರೆಬಿಡಿಸಿ' ಸರ್ವಜನರಲ್ಲಿ ಓಡಾಡುವಂತೆ ಮಾಡಿದರು. ವರ್ಗೀಕರಣ ಮತ್ತು ಕಾಯಕ ಗಳಲ್ಲಿದ್ದ ಮೇಲು-ಕೀಳು ನಿರ್ಮೂಲ ಮಾಡಿ ಸರ್ವರನ್ನೂ ದುಡಿಯ ಹಚ್ಚಿದರು; ಪುರೋಹಿತಶಾಹಿ ಮಾಡುವ ಜಂಗಮ, ಜೋಗಿ, ಆಚಾರ್ಯ ಇವರನ್ನೂ ಕಾಯಕ ಮಾಡ ಹಚ್ಚಿದರು. ಆಧ್ಯಾತ್ಮ ಮತ್ತು ವ್ಯವಹಾರ ಇವೆರಡನ್ನೂ ಒಂದಾಗಿಸಿದರು.

ಶರಣತನ ಅನ್ನುವುದು ಒಂದು ಶಿಷ್ಟಾಚಾರವಲ್ಲ, ಒಂದು ಜಾತಿಯಲ್ಲ; ಚೌಕಟ್ಟಿಗೆ ಒಳಗಾದ ಒಂದು ಧರ್ಮವೂ ಅಲ್ಲ; ಇದೊಂದು ಮಾರ್ಗ. ಮಾರ್ಗ ಯಾರೊಬ್ಬರ ಸೊತ್ತೂ ಅಲ್ಲ; ಯಾರೂ ಅದನ್ನು ಬಳಸಿ ನಡೆಯುಬಹುದು; ಎಲ್ಲರಿಗೂ ಅದು ಮುಕ್ತ. ಎಲ್ಲರ ನಡೆಯಿಂದ ಅದು ಇನ್ನೂ ಬಲಗೊಳ್ಳುವುದು; ಸ್ಫುಟಗೊಳ್ಳುವುದು; ಶುದ್ಧವೂ ಸುಲಭವೂ ಆಗುವುದು. ಶಿವ ಶರಣರು ಸಮಗ್ರ ಕ್ರಾಂತಿಯಿಂದ ಬಹು ಹಿಂದೆಯೇ ಕನ್ನಡ ನಾಡಿನಲ್ಲಿ ಇಂಥಮಾರ್ಗವನ್ನು ನಿರ್ಮಾಣ ಮಾಡಿದರು ಈ ಮಾರ್ಗದ ಒಂದು ಸ್ಥೂಲ ಪರಿಚಯು ಬಳ್ಳಾರಿ ಜಿಲ್ಲೆಯ ಶಿವ ಶರಣರಚರಿತ್ರೆಯಿಂದ ಆಗುವುದೆಂದು ನಂಬಲಾಗಿದೆ.

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

ಬೆಲೆ: ಪ್ರತಿ ಒಂದಕ್ಕೆ ೨೫ ಪೈಸೆ

ಸ್ಥಳಿಕ ಗಳಗಂಡ —ಪಿ. ಎಸ್. ಶಂಕರ್

ಜನಸಂಖ್ಯಾ ಸ್ಫೋಟ ಮತ್ತು
ಅಂತರರಾಷ್ಟ್ರೀಯ ಜನಸಂಖ್ಯಾ ವರ್ಷ —ಪಿ. ಬಿ. ಅಂಗಡಿ

ಶುಕನೂರು —ಎಸ್. ಎಲ್. ಶಾಂತಕುಮಾರಿ

ಜಗನ್ನಾಥದಾಸರ ಹಿರಿಮೆ —ವಸಂತ ಕುಷ್ಟಗಿ

ನವಭಾರತ ನಿರ್ಮಾಪಕ
ರಾಜಾ ರಾಮಮೋಹನ ರಾಯ್ —ಜೆ. ಜಿ. ಕಾಡದೇವರ

ಭಾರತೀಯ ಸಂವಿಧಾನದಲ್ಲಿ
ಮೂಲಭೂತ ಹಕ್ಕುಗಳು —ಶಿವಾನಂದ ಗುಬ್ಬಣ್ಣವರ

ಭಾರತದ ಆರ್ಥಿಕ ಬೆಳವಣಿಗೆಯ
ಗುಣದೋಷಗಳು —ಡಿ. ಎ. ಹೆಗಡೆ

ಸಸ್ಯಪೋಷಕಗಳು —ಸಾ. ನಾ. ವಜ್ರನಾಭಯ್ಯ

ಕೌಟಿಲ್ಯನ ಅರ್ಥಶಾಸ್ತ್ರ —ಅರವಿಂದ ಜೋಶಿ

ಮೊಹರ್ರಂ ಪದಗಳು —ಚೆನ್ನಣ್ಣ ವಾಲೀಕಾರ

ವ್ಯಾಸಂಗವಿಸ್ತರಣ—ಪ್ರಕಟನ ವಿಭಾಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ